School Leadership

TESS India

# Transforming teaching-learning process: leading assessment in your school

## ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು: ಪ್ರೌಢ ಶಾಲೆಗಳಲ್ಲಿ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯ ಸುಧಾರಣೆಯ





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ** (**Open Educational Resource-OER**) ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು** (**National School leadership Curriculum Framework-India**) ಗುರುತಿಸಿರುವ ಶಾಲಾ ನಾಯಕತ್ವದ ಯಥಾದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

 ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾಗಿರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL05v1*
*Karnataka*

*Except for third party materials and othe errwwise stated, this content is made available unde err a Creative Commons Attribution-ShareAlike licence: http://creaat tivecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದಲ್ಲಿ ಯಾವುದರ ಬಗ್ಗೆ ನೀಡಲಾಗಿದೆ / ಈ ಘಟಕದಲ್ಲಿ ಏನಿದೆ

ಮೌಲ್ಯಮಾಪನವು ಹೆಚ್ಚಿನದಾಗಿ ಪರೀಕ್ಷೆಗಳ ಯಶಸ್ಸು ಅಥವಾ ವಿಫಲತೆಯೊಂದಿಗೆ ಸಂಬಂಧೀಕರಿಸಲ್ಪಟ್ಟಿದೆ. ಪರೀಕ್ಷೆಯಲ್ಲಿ ಸಾಧನೆಗೈಯುವುದು ಅತೀ ಮುಖ್ಯವಾಗಿದೆ ಹಾಗೂ ಇದು ಉತ್ತಮ ಕಾಲೇಜಿನಲ್ಲಿ ಸ್ಥಾನ ಗಳಿಸಲು, ಸಾಮಾಜಿಕ ಅಂತಸ್ತನ್ನು ಹೊಂದಲು, ಮುಂದಿನ ವೃತ್ತಿ ಜೀವನದಲ್ಲಿ ಯಶಸ್ಸಿನೊಂದಿಗೆ ಸಂಬಂಧವನ್ನು ಹೊಂದಿದೆ. ಹೇಗಿದ್ದರೂ, ಪರೀಕ್ಷೆಗಾಗಿ ಪೂರ್ವತಯಾರಿಯನ್ನು ನಡೆಸುವುದು ಕಲಿಕಾ ಅನುಭವದ ಮೇಲೆ ನಕಾರಾತ್ಮಕ ಪ್ರಭಾವವನ್ನು ಭೀರುವುದು. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು NCF (NCERT, 2005, p. 71) ನಲ್ಲಿ ಈ ರೀತಿ ಹೇಳುವ ಮೂಲಕ ಈ ಸಮಸ್ಯೆಯ ಆಳವನ್ನು ಗುರುತಿಸಿದೆ:

> ಮಕ್ಕಳಿಗೆ ಕಲಿಕೆಯನ್ನು ಅರ್ಥಯುತ ಮತ್ತು ಆನಂದದಾಯಕವಾಗಿಸಲು ಹಾಕುವ ಪ್ರಯತ್ನಗಳ ಮೇಲೆ ಪರೀಕ್ಷೆಗಳ ಅನಾರೋಗ್ಯಕರ ಪರಿಣಾಮದ ಬಗ್ಗೆ ನಮಗೆ ಕಳಕಳಿಯಿದೆ. ಪ್ರಸ್ತುತ, ಪರೀಕ್ಷಾಮಂಡಳಿಯ ಪರೀಕ್ಷೆಗಳು ಪ್ರೀ-ಸ್ಕೂಲ್ ನಿಂದ ಪ್ರಾರಂಭಗೊಂಡು ಶಾಲೆಯ ಶೈಕ್ಷಣಿಕ ವರ್ಷದ ಎಲ್ಲಾ ಪರೀಕ್ಷೆಗಳು ಮತ್ತು ಮೌಲ್ಯಮಾಪನದ ಮೇಲೆ ನಕಾರಾತ್ಮಕವಾಗಿ ಪ್ರಭಾವವನ್ನು ಭೀರುತ್ತಿದೆ.

ಈ ಘಟಕದಲ್ಲಿ ನೀವು ಮೌಲ್ಯಮಾಪನವನ್ನು, ಪ್ರತಿದಿನದ ತರಗತಿಯ ಅಭ್ಯಾಸದ ಅವಿಭಾಜ್ಯ ಅಂಗವಾಗಿಸುವ ಮೂಲಕ ವಿದ್ಯಾರ್ಥಿಗಳ ಬೆಳವಣಿಗೆಯಮೇಲ್ವಿಚಾರಣೆ ಮತ್ತು ಮಾರ್ಗದರ್ಶನವನ್ನು ನೀಡಲು ಇರುವ ಅವಕಾಶವಾಗಿ ಕಂಡುಕೊಳ್ಳುವಿರಿ. ಈ ರೀತಿಯ ನಿರಂತರ ಮೌಲ್ಯಮಾಪನವು ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಶಿಕ್ಷಕರಿಗೆ ನಿಯತವಾಗಿ ಹಿಮ್ಮಾಹಿತಿಯನ್ನು ನೀಡುವುದು ಹಾಗೂ ಈ ಅಂಶವನ್ನು ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಶಾಲೆಯಲ್ಲಿ ಹೆಚ್ಚು ಪರಿಣಾಮಕಾರಿ ಕಲಿಕಾರ್ಥಿಗಳಾಗಿ ರೂಪುಗೊಳ್ಳವಂತೆ ಮಾಡಲು ಬಳಸಬಹುದಾಗಿದೆ. ಈ ಮೌಲ್ಯಮಾಪನವನ್ನು ಕಲಿಕೆಯನ್ನು ಉತ್ತೇಜಿಸಲು ಬಳಸಬೇಕಾದರೆ, ಶಿಕ್ಷಕರಾಗಿ ನೀವು, ವಿದ್ಯಾರ್ಥಿಗಳ ಮೇಲ್ವಿಚಾರಣೆಯನ್ನು ಸಾಕ್ಷಾಧಾರಗಳನ್ನು ಸಂಗ್ರಹಿಸುವುದು, ಮಾಹಿತಿಯನ್ನು ವಿಶ್ಲೇಷಿಸುವುದು, ಕಲಿಕಾ ಚಟುವಟಿಕೆಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದರ ಮೂಲಕ ಮಾಡಬೇಕಾಗುತ್ತದೆ ಮತ್ತು ಹಿಮ್ಮಾಹಿತಿಯನ್ನು ನೀಡಬೇಕಾಗುತ್ತದೆ. ಈ ರೀತಿಯಲ್ಲಿ ಮೌಲ್ಯಮಾಪನವನ್ನು ಬಳಸುವುದರಿಂದ ಎಲ್ಲಾ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶವನ್ನು ಉತ್ತಮಪಡಿಸಬಹುದು.

## ಕಲಿಕಾ ಡೈರಿ

ಈ ಘಟಕದಲ್ಲಿ ನೀವು ಕೆಲಸ ಮಾಡುವಾಗ, ನಿಮ್ಮ ಕಲಿಕೆಡೈರಿಯಲ್ಲಿ (ಒಂದು ಪುಸ್ತಕ ಅಥವಾ ಒಂದು ಫೋಲ್ಡರ್) ಟಿಪ್ಪಣಿಗಳನ್ನು ಬರೆದುಕೊಳ್ಳಲು ಸೂಚಿಸಲಾಗುತ್ತದೆ. ನಿಮ್ಮ ಆಲೋಚನೆಗಳನ್ನು ಹಾಗು ಯೋಜನೆಗಳನ್ನು ಒಂದೆಡೆ ಸಂಗ್ರಹಿಸಿಇಟ್ಟುಕೊಳ್ಳಲು ಈ ಡೈರಿನೆರವಾಗುತ್ತದೆ. ಬಹುಶ: ಈಗಾಗಲೆ ನೀವು ಇಂತಹ ಒಂದು ಡೈರಿಯನ್ನು ಬರೆಯಲು ಪ್ರಾರಂಭಿಸಿರಬಹುದು.

ನೀವು ಈ ಘಟಕದ ಬಗ್ಗೆ ಒಬ್ಬರೇ ಕೆಲಸಮಾಡುತ್ತಿರಬಹುದಾದರೂ, ಮತ್ತೊಬ್ಬ ಶಾಲಾನಾಯಕರೊಡನೆ ನಿಮ್ಮ ಕಲಿಕೆಯನ್ನು ಹಂಚಿಕೊಂಡರೆ ನೀವು ಇನ್ನೂ ಹೆಚ್ಚಿನದನ್ನು ಕಲಿಯಬಹುದು. ಇವರು ನೀವು ಒಟ್ಟಾಗಿ ಕೆಲಸ ಮಾಡುವ ಸಹದ್ಯೋಗಿಯಾಗಿರಬಹುದು ಅಥವಾ ಒಂದು ಹೊಸ ಸಂಬಂಧವನ್ನು ಬೆಳೆ ಸಿಕೊಳ್ಳಬಹುದಾದ ವ್ಯಕ್ತಿ ಇರಬಹುದು. ಇದನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಅಥವಾ ಅನೌಪಚಾರಿಕವಾಗಿಯೂ ಮಾಡಬಹುದು. ಈ ತರಹದ ಭೇಟಿಗಳಲ್ಲಿ, ನೀವು ಕಲಿಕೆ ಡೈರಿಯಲ್ಲಿ ಮಾಡಿಕೊಂಡಿರುವ ಟಿಪ್ಪಣಿಗಳು ಉಪಯೋಗವಾಗುವುದಲ್ಲದೆ, ನಿಮ್ಮ ಧೀರ್ಘಾವಧಿಯ ಕಲಿಕೆ ಹಾಗು ಬೆಳವಣಿಗೆಯನ್ನೂ ನಿರೂಪಿಸುತ್ತದೆ.

# ಈ ಘಟಕದಿಂದ ಶಾಲಾ ನಾಯಕರು ಏನನ್ನು ಕಲಿಯಬಹುದು

- ಮೌಲ್ಯಮಾಪನಕ್ಕಾಗಿ ಕಲಿಕೆ ಮತ್ತು ಕಲಿಕೆಗಾಗಿ ಮೌಲ್ಯಮಾಪನದ ನಡುವಿನ ವ್ಯತ್ಯಾಸವನ್ನು ತಿಳಿಯಬಹುದು.

- ನಿಮ್ಮ ಶಾಲೆಯ ಶಿಕ್ಷಕರೊಂದಿಗೆ ರಚನಾತ್ಮಕ ಮೌಲ್ಯಮಾಪನವನ್ನು ಅಭಿವೃದ್ಧಿ ಪಡಿಸುವಿಕೆಯ ತಂತ್ರವನ್ನು ಮಾರ್ಗದರ್ಶಿಸುವುದು.
- ಶಿಕ್ಷಕರು ರಚನಾತ್ಮಕ ಮೌಲ್ಯಮಾಪನದ ಸಮಯದಲ್ಲಿ ಕಲೆಹಾಕಿದಂತಹ ಸಾಕ್ಷಾಧಾರಗಳನ್ನು ಮತ್ತು ದತ್ತಾಂಶಗಳನ್ನು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವಂತಹ ಹಿಮ್ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡುವುದಕ್ಕೆ ಬಳಸಿಕೊಳ್ಳಲು ಸಹಾಯ ಮಾಡುವುದು.

# ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನ

ಮೌಲ್ಯಮಾಪನದಲ್ಲಿ ಎರಡು ಬಗೆಗಳಿವೆ.ಅವುಗಳನ್ನು ವಿಭಿನ್ನ ರೀತಿಯಲ್ಲಿ ಬಳಸುವುದರಿಂದ ಮತ್ತು ವಿವಿಧ ಉದ್ದೇಶಗಳಿಗೆ ಬಳಸುವುದರಿಂದ ಒಂದಕ್ಕಿಂತ ಒಂದು ಭಿನ್ನ ಎಂದು ಪರಿಗಣಿಸಲಾಗಿದೆ.ನಿಮ್ಮ ಶೈಕ್ಷಣಿಕ ಅನುಭವದಲ್ಲಿ ನಿರ್ಣಯಾತ್ಮಕ ಮೌಲ್ಯಮಾಪನದ ಪರಿಚಯ ನಿಮಗಾಗಿರಬಹುದು ಆದರೆ, ರಚನಾತ್ಮಕ ಮೌಲ್ಯಮಾಪನದ ಮೌಲ್ಯ ಮತ್ತು ಅವಕಾಶವನ್ನು ಕಂಡುಕೊಳ್ಳದಿರಬಹುದು ಅಥವಾ ನೀವು ಈಗಾಗಲೇ ಇದನ್ನು ಮಾಡುತ್ತಿರಬಹುದು ಆದರೆ ನಿಮ್ಮ ಕೌಶಲ್ಯದ ಬಗ್ಗೆ ಅರಿವಿಲ್ಲದಿರಬಹುದು.

- ರಚನಾತ್ಮಕ ಮೌಲ್ಯಮಾಪನವನ್ನು ಹಲವರು ***"ಕಲಿಕೆಗಾಗಿ ಮೌಲ್ಯಮಾಪನ"*** ಎಂದು ಪರಾಮರ್ಶಿಸುವರು. ಈ ಬಗೆಯ ಮೌಲ್ಯಮಾಪನದ ಮುಖ್ಯ ಉದ್ದೇಶವೆಂದರೆ ವಿದ್ಯಾರ್ಥಿಗಳು ಕಲಿಕೆಯನ್ನು ಉತ್ತಮಪಡಿಸಿಕೊಳ್ಳ ಮತ್ತು ಪರಿಣಾಮಕಾರಿ ಪ್ರಗತಿಯನ್ನು ಕಂಡುಕೊಳ್ಳಲು ಸಹಕಾರಿಯಾಗುವಂತಹ ನಿರ್ಮಾಣಾತ್ಮಕ /ರಚನಾತ್ಮಕ ಹಿಮ್ಮಾಹಿತಿಯನ್ನು ನೀಡುವುದಾಗಿದೆ.
- ನಿರ್ಣಯಾತ್ಮಕ ಮೌಲ್ಯಮಾಪನವನ್ನು ***'ಕಲಿಕೆಯ ಮೌಲ್ಯಮಾಪನ'*** ಎಂದೂ ಸಹ ಕರೆಯುವರು. ಈ ಬಗೆಯ ಮೌಲ್ಯಮಾಪನದ ಉದ್ದೇಶವೆಂದರೆ, ಸಾಮಾನ್ಯವಾಗಿ ವರ್ಷದ ಕೊನೆಯಲ್ಲಿ ಕೈಗೊಳ್ಳುವ ಪರೀಕ್ಷೆಗಳಲ್ಲಿಅಥವಾ ಅವಧಿಯ ಕೊನೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಸಾಧನೆ ಮತ್ತು ಕಾರ್ಯಕ್ಷಮತೆಯನ್ನು ಗುರುತಿಸುವಂತೆ ಮಾಡುವುದಾಗಿದೆ.



**ಚಿತ್ರ-1 ವಿದ್ಯಾರ್ಥಿಯ ಕಲಿಕೆಯಲ್ಲಿನ ಅಂತರಗಳ ಬಗ್ಗೆ ಚರ್ಚಿಸುತ್ತಿರುವುದು.Figure 1**Discussing gaps in student learning.

ನಿರ್ಣಯಾತ್ಮಕ ಮೌಲ್ಯಮಾಪನವನ್ನು ಬಳಸಿಕೊಂಡು ಒಬ್ಬ ವಿದ್ಯಾರ್ಥಿಯನ್ನು ಇತರರೊಂದಿಗೆ ಹೋಲಿಕೆ ಮಾಡಲಾಗುತ್ತದೆ.ರಚನಾತ್ಮಕ ಮೌಲ್ಯಮಾಪನವನ್ನು ಕಲಿಕೆಯ ಪ್ರಗತಿಗಾಗಿ ಬಳಸಲಾಗುತ್ತದೆ.

ರಚನಾತ್ಮಕ ಮೌಲ್ಯಮಾಪನವು ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯಲ್ಲಿ ಮುಂದುವರೆಯಲು ಪಥವನ್ನು ಸೃಷ್ಟಿಸುತ್ತದೆ. ಇದು ಈ ಕೆಳಗಿನ ಅಂಶಗಳನ್ನು ಗುರುತಿಸಬಲ್ಲದು:

- ವಿದ್ಯಾರ್ಥಿಯು ಏನು ಮಾಡಬಲ್ಲನು ಮತ್ತು ಮಾಡಲಿಕ್ಕಾಗದು.

- ವಿದ್ಯಾರ್ಥಿಗಳಿಗೆ ಯಾವುದು ಕಷ್ಟಕರವಾಗಿದೆ.
- ವಿದ್ಯಾರ್ಥಿಗಳಲ್ಲಿರುವ ತಪ್ಪುಗ್ರಹಿಕೆಗಳು ಮತ್ತು ಅಂತರಗಳು.

ಇದು ಇವುಗಳನ್ನು ಒಳಗೊಂಡಿದೆ:-

- ವಿದ್ಯಾರ್ಥಿಯೊಂದಿಗೆ ಸಂಭಾಷಿಸುವುದು, ಸ್ಪಷ್ಟ ಕಲಿಕ ಗುರಿಗಳ ಬಗ್ಗೆ ಚರ್ಚಿಸುವುದು.
- ವಿದ್ಯಾರ್ಥಿಗಳು ತಮ್ಮ ಗುರಿಗಳನ್ನು ಸಾಧಸಲು ಸಕ್ರಿಯರಾಗುವುದು.
- ಪ್ರಗತಿಯ ನಿಗಾವಣೆ ಮಾಡುವುದು, ಇದು ಸ್ವ ಮತ್ತು ಸಮಾನ (ಸಹ-peer)ಪುನರ್ ಪರಿಶೀಲನೆಯನ್ನು ಒಳಗೊಂಡಿದೆ.

ಸಮಯಕ್ಕೆ ಸರಿಯಾದ ಮತ್ತು ಉಪಯುಕ್ತವಾದ ಹಿಮ್ಮಾಹಿತಿಯು ಈ ಪ್ರಕ್ರಿಯೆಯ ಭಾಗವಾಗಿದೆ, ಏಕೆಂದರೆ ಇದು ವಿದ್ಯಾರ್ಥಿಯನ್ನು ಉತ್ತಮವಾಗಿಸಲು / ಸುಧಾರಿಸಲು ಸಹಕಾರಿಯಾಗಿದೆ.ವಿದ್ಯಾರ್ಥಿಯು ತನ್ನ ಗುರಿಯನ್ನು ಸಾಧಿಸುವವರೆಗೆ ಶಿಕ್ಷಕರು ಮತ್ತು ವಿದ್ಯಾರ್ಥಿ ಇಬ್ಬರೂ ಸಹ ಧೃಢ ನಿರ್ದಾರವನ್ನು ತೋರಿಸುವುದು/ ಪಟ್ಟುಹಿಡಿಯುವುದು ಬಹಳ ಮಹತ್ವದ್ದಾಗಿದೆ, ಇದು ಖಂಡಿತವಾಗಿಯೂ ಶಿಕ್ಷಕರು ತಮ್ಮವಿದ್ಯಾರ್ಥಿಯ ಅಗತ್ಯಕ್ಕೆ ಅನುಗುಣವಾಗಿ ತಮ್ಮ ಬೋಧನೆಯಲ್ಲಿ ಮಾರ್ಪಾಡು ಮಾಡುಕೊಳ್ಳುವಿಕೆಯನ್ನು ಒಳಗೊಂಡಿದೆ..

ಆದುದರಿಂದ ರಚನಾತ್ಮಕ ಮೌಲ್ಯಮಾಪನವು, ಔಪಚಾರಿಕ ರೀತಿಯ ನಿರ್ಣಯಾತ್ಮಕ ಮೌಲ್ಯಮಾಪನಕ್ಕಿಂತ ಹೆಚ್ಚು ವಿಭಿನ್ನವಾದ ಉದ್ದೇಶವನ್ನುಪ್ರಸ್ತಾವನೆಯನ್ನು (approach) ಹೊಂದಿದೆ.ರಚನಾತ್ಮಕ ಮೌಲ್ಯಮಾಪನವು ತರಗತಿ ಸನ್ನಿವೇಶದಲ್ಲಿ ನಡೆಯುವುದು ಮತ್ತು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧದ ಮೇಲೆ ರಚಿಸಲ್ಪಡುತ್ತದೆ/ ವೃದ್ಧಿಯಾಗುತ್ತದೆ. ರಚನಾತ್ಮಕ ಮೌಲ್ಯಮಾಪನದ ಮುಖ್ಯ ಲಕ್ಷಣಗಳೆಂದರೆ: (Central Board of Secondary Education, 2009)

- ಇದು ಲಕ್ಷನ ನಿರೂಪಣಾ /ರೋಗನಿಧಾನ (diagnostic) ಮತ್ತು ಪರಿಹಾರಾತ್ಮಕವಾದದ್ದು.
- ಪರಿಣಾಮಕಾರಿ ಹಿಮ್ಮಾಹಿತಿಗೆ ಅವಕಾಶ ಮಾಡಿಕೊಡುವುದು.
- ವಿದ್ಯಾರ್ಥಿಗಳು ಅವರದೇ ಸ್ವ ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಒಂದು ವೇದಿಕೆಯನ್ನು ಪೂರೈಸುವುದು.
- ಮೌಲ್ಯಮಾಪನದ ಫಲಿತಾಂಶವನ್ನು ಪರಿಗಣಿಸಲು ತಮ್ಮ ಬೋಧನೆಯಲ್ಲಿ ಬದಲಾವಣೆ ಮಾಡಿಕೊಳ್ಳಲು ಶಿಕ್ಷಕರನ್ನು ಶಕ್ತರನ್ನಾಗಿಸುತ್ತದೆ.
- ವಿದ್ಯಾರ್ಥಿಯ ಅಭಿಪ್ರೇರಣೆ ಮತ್ತು ಸ್ವಾಭಿಮಾನದ ಮೇಲಿನ ಮೌಲ್ಯಮಾಪನದ ಗಂಭೀರ /ಗಹನವಾದ ಪ್ರಭಾವವನ್ನು ಗುರುತಿಸುವರು, ಇದು ಬಹಳ ಮುಖ್ಯ ಏಕೆಂದರೆ ಇವೆರಡೂ ಅಂಶಗಳು ಕಲಿಕೆಯನ್ನು ಹೆಚ್ಚು ಪ್ರಭಾವಿಸುತ್ತವೆ.
- ವಿದ್ಯಾರ್ಥಿಗಳು ಸ್ವ-ಮೌಲ್ಯಮಾಪನಮಾಡಿಕೊಳ್ಳುವ ಮತ್ತು ಹೇಗೆ ಸುಧಾರಿಸಬಹುದು /ಉತ್ತಮಪಡಿಸಬಹುದು ಎಂಬುದನ್ನು ತಿಳಿಯುವುದರ ಅಗತ್ಯತೆಯನ್ನು ಗುರುತಿಸುವರು.
- ಏನನ್ನು ಬೋಧಿಸಬೇಕು ಎಂಬುದನ್ನು ವಿನ್ಯಾಸ ಮಾಡುವಾಗ, ವಿದ್ಯಾರ್ಥಿಯ ಪೂರ್ವಜ್ಞಾನ ಮತ್ತು ಅನುಭವದ ಮೇಲೆ ನಿರ್ಮಾಣ ಮಾಡಲಾಗುತ್ತದೆ.
- ಹೇಗೆ ಮತ್ತು ಏನನ್ನು ಬೋಧಿಸಬೇಕು ಎಂದು ನಿರ್ಧಾರ ಮಾಡುವಾಗ ವಿವಿದ ಕಲಿಕಾ ಶೈಲಿಗಳನ್ನು ಒಳಗೊಳ್ಳಲಾಗುತ್ತದೆ.
- ವಿದ್ಯಾರ್ಥಿಗಳು, ಅವರ ಕಾರ್ಯವನ್ನು ತೀರ್ಮಾನ ಮಾಡಲು ಬಳಸಲಾಗುವ ಮಾನದಂಡಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವುದನ್ನು ಉತ್ತೇಜಿಸುತ್ತದೆ.
- ಹಿಮ್ಮಾಹಿತಿ ಪಡೆದ ನಂತರ ತಮ್ಮ ಕಾರ್ಯವನ್ನು ಉತ್ತಮಪಡಿಸಿಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡುತ್ತದೆ.
- ವಿದ್ಯಾರ್ಥಿಗಳು ತಮ್ಮ ಸಹವಿದ್ಯಾರ್ಥಿಗಳಿಗೆ ಬೆಂಬಲ ನೀಡಲು, ಅವರಿಂದ ಬೆಂಬಲ ಅಪೇಕ್ಷಿಸುವಂತೆ ಮಾಡಲು ಸಹಾಯಕವಾಗಿದೆ. .

ರಚನಾತ್ಮಕ ಮೌಲ್ಯಮಾಪನವು ಶಿಕ್ಷಕರು ವಿದ್ಯಾರ್ಥಿಗಳು ಕಲಿಕೆಯಲ್ಲಿ ಎಲ್ಲಿದ್ದಾರೆ ಎಂಬುದರ ಆಧಾರದ ಮೇಲೆ ರಚನೆಯನ್ನು ಕೈಗೊಳ್ಳಲು

ಅನುವು ಮಾಡಿಕೊಡುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಅವರು ಸಾಧಿಸಬೇಕಾದರೆ ಏನು ಮಾಡಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲೂ ಸಹ ಅನುವು ಮಾಡಿಕೊಡುತ್ತದೆ. ಈ ಕಾರಣದಿಂದ, ರಚನಾತ್ಮಕ ಮೌಲ್ಯಮಾಪನವು ಕಲಿಕಾರ್ಥಿಯನ್ನು ಪಾಲ್ಗೊಳ್ಳುವಂತೆ ಮಾಡುತ್ತದೆ ಮತ್ತು ವಿದ್ಯಾರ್ಥಿಯು ತಮ್ಮ ಕಲಿಕೆಯ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

ನಿರಂತರ ಮತ್ತು ಸಮಗ್ರ ಮೌಲ್ಯಮಾಪನವು ಈ ರೀತಿ ವಿವರಿಸುತ್ತದೆ (CCE) (Central Board of Secondary Education, 2009):

> ಸಿಸಿಇ ಯು ವಿದ್ಯಾರ್ಥಿಗಳ ಭೌದ್ಧಿಕ, ಭಾವನಾತ್ಮಕ, ದೈಹಿಕ, ಸಾಂಸ್ಕೃತಿಕ, ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಖಾತರಿಪಡಿಸಿಕೊಳ್ಳುತ್ತಾ, ವಿದ್ಯಾರ್ಥಿಯ ನಿರಂತರ ವಿಕಾಸದ ಮೇಲೆ ಹೆಚ್ಚು ಗಮನವನ್ನು ನೀಡುತ್ತದೆ. ಆದುದರಿಂದ ಇದು ಕೇವಲ ತಾರ್ಕಿಕ /ಶಾಲೆಗೆ ಸಂಬಂಧಿಸಿದ ಸಾಧನೆಗಳನ್ನು ಮೌಲ್ಯಮಾಪನಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಇದು ಮೌಲ್ಯಮಾಪನವನ್ನು ಕಲಿಕಾರ್ಥಿಗಳನ್ನು ಹಿಮ್ಮಾಹಿತಿಯನ್ನು ನೀಡಲು ಮಾಹಿತಿಯನ್ನು ಪೂರೈಸುವಂತೆ ಹಾಗೂ ತರಗತಿಯಲ್ಲಿ ಕಲಿಕೆಯನ್ನು ಉತ್ತಮಪಡಿಸಲು ಅನುಸರಣೆ ಕಾರ್ಯವನ್ನು ಮಾಡಲು ಉತ್ತೇಜಿಸುವ ಮತ್ತು ಕಲಿಕಾರ್ಥಿಯ ಪ್ರೊಫೈಲ್ ನ ಸಮಗ್ರ ಚಿತ್ರಣವನ್ನು ನೀಡುವ ಸಾಧನವಾಗಿ ಬಳಕೆ ಮಾಡುತ್ತದೆ.

ಚಟುವಟಿಕೆ 1, ನಿಮ್ಮನ್ನು ನಿಮ್ಮ ಶಾಲಾ ಸನ್ನಿವೇಶದಲ್ಲಿ /ಸಂಧರ್ಭದಲ್ಲಿ ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನದ ನಡುವಿನ ವ್ಯತ್ಯಾಸದ ಬಗ್ಗೆ ಯೋಚಿಸುವಂತೆ ಹೇಳುತ್ತದೆ.ಈ ಚಟುವಟಿಕೆಯನ್ನು ನಿಮ್ಮ ಶಿಕ್ಷಕರರೊಂದಿಗೆ ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನದ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಲು ಬಳಸಿಕೊಳ್ಳಬಹುದಾಗಿದೆ.

## ಚಟುವಟಿಕೆ 1: ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನವನ್ನು ಗುರುತಿಸುವುದು.

ನಿಮ್ಮ ಶಾಲೆಯ ತರಗತಿಗಳಲ್ಲಿ ಬಳಸಬಹುದಾದಂತಹ ಮೌಲ್ಯಮಾಪನಾ ಅವಕಾಶಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ. ನಿಮ್ಮ ಕಲಿಕಾ ಡೈರಿಯಲ್ಲಿ ಎರಡು ಕಾಲಂಗಳನ್ನು ಹಾಕಿಕೊಂಡು, ಒಂದರಲ್ಲಿ ರಚನಾತ್ಮಕ ಮೌಲ್ಯಮಾಪನ, ಮತ್ತೊಂದರಲ್ಲಿ ನಿರ್ಣಯಾತ್ಮಕ ಮೌಲ್ಯಮಾಪನವೆಂದು ಬರೆಯಿರಿ. ಮುಂದಿನ ಪಟ್ಟಿಯಲ್ಲಿ ನೀಡಿರುವ ಮೌಲ್ಯಮಾಪನದ ಅಂಶಗಳನ್ನು ಎರಡು ಕಾಲಂಗಳಲ್ಲೊಂದರಲ್ಲಿ ಬರೆಯಿರಿ. ಸನ್ನಿವೇಶಗಳ ಆಧಾರವಾಗಿ ಕೆಲವು ಅಂಶಗಳು ಎರಡೂ ಕಾಲಂಗಳಲ್ಲಿ ಹೋಗಬಹುದು ಎಂದೆನಿಸಬಹುದು. ಉದಾ: ಹಾಡನ್ನು ಹೇಳುವುದು ಸಂಗೀತ ಪರೀಕ್ಷೆಯ ಭಾಗವಾಗಿದ್ದಲ್ಲಿ ನಿರ್ಣಯಾತ್ಮಕವಾಗುವುದು, ಅದೇ ಶಾಲಾ ಕಾರ್ಯಕ್ರಮಕ್ಕೆ ತಯಾರಿ ನಡೆಸುವ ಹಂತದಲ್ಲಿದ್ದಲ್ಲಿ ರಚನಾತ್ಮಕವಾಗುವುದು.

ಇದು ನೀವೊಬ್ಬರೇ ಮಾಡಬಹುದಾದಂತಹ ಚಟುವಟಿಕೆಯಾಗಿದೆ ಅಥವಾ ಗುಂಪು ಚಟುವಟಿಕೆಯಾಗಿ ಇದನ್ನು ವಿಸ್ತರಿಸಿಕೊಳ್ಳಬಹುದು.

1. ಲೇಖನಿ ಮತ್ತು ಹಾಳೆ ಪರೀಕ್ಷೆ
2. ನೆನಪುಗಳಿಂದ ಪುನರ್ ಸಂಗ್ರಹಿಸುವುದು / ಸ್ಮರಿಸಿಕೊಳ್ಳುವುದು.
3. ವಿಜ್ಞಾನದಲ್ಲಿ ಪ್ರಾಕ್ ಕಲ್ಪನೆ ಊಹೆ ಮಾಡುವುದು Hypothesisingಮತ್ತು ಪ್ರಯೋಗಗಳನ್ನು ಮಾಡುವುದು.
4. ತೆರೆದ ಪುಸ್ತಕ ಪರೀಕ್ಷೆ.
5. ವಿದ್ಯಾರ್ಥಿಯನ್ನು ಶಿಕ್ಷಕರು ಅವಲೋಕಿಸುವುದು.
6. ಒಂದು ಖಾದ್ಯವನ್ನು ತಯಾರಿಸುವುದು /ಅಡಿಗೆ ಮಾಡುವುದು.
7. ಪ್ರಬಂಧಗಳು.
8. ಪ್ರಶ್ನೆಗಳಿಗೆ ಮೌಖಿಕ ಪ್ರತಿಕ್ರಿಯೆಯನ್ನು ನೀಡುವುದು.
9. ಪ್ರಾತ್ಯಕ್ಷಿಕೆ.

10. ವಿದ್ಯಾರ್ಥಿಯು ರಾಗ ಸಂಯೋಜನೆ ಮಾಡಿದ ಹಾಡನ್ನು ಪ್ರದರ್ಶಿಸುವುದು.
11. ಅಥ್ಲೆಟಿಕ್ ರೇಸ್ ನಲ್ಲಿ ವೈಯಕ್ತಿಕ ಗುರಿಯನ್ನು /ಉತ್ತಮವಾದುದನ್ನು ನಿಶ್ಚಯಿಸುವುದು.
12. ನಾಟಕವನ್ನು ಕಥಾವಸ್ತುವನ್ನು ಬರೆಯುವುದು ಮತ್ತು ಅಭಿನಯಿಸುವುದು.

**ಚರ್ಚೆ:-**

ಕೆಲವು ಕಾರ್ಯ /ಚಟುವಟಿಕೆಗಳನ್ನು ರಚನಾತ್ಮಕ ಅವಕಾಶಗಳೆಂದು ಸುಲಭವಾಗಿ ಗುರುತಿಸಬಹುದು. ಉದಾ: ಆಯ್ಕೆ-8, ಮೌಖಿಕ ಪ್ರತಿಕ್ರಿಯೆಯು ತಕ್ಷಣದ ಹಿಮ್ಮಾಹಿತಿ ಮತ್ತು ಚರ್ಚೆಗೆ ಅನುವು ಮಾಡಿಕೊಡುತ್ತದೆ. ಬೇರೆಯವು ನಿರ್ಣಯಾತ್ಮಕ ಮಾಹಿತಿಯನ್ನು ನೀಡುವುವು..ಉದಾ: ಲೇಖನಿ ಮತ್ತು ಹಾಳೆ ಪರೀಕ್ಷೆ, ಇದು ಅಂತಿಮ ಶ್ರೇಣಿಯೆಡೆಗೆ ಒಯ್ಯುತ್ತದೆ. ಹೀಗಾದರೂ ಉದ್ದೇಶ ಹಾಗೂ ಮೌಲ್ಯಮಾಪನದ ಸ್ವಭಾವಗಳನ್ನು ಅರಿಯದೆಯೇ, ಹೆಚ್ಚಿನವುಗಳನ್ನು ವಿಭಾಗೀಕರಿಸುವುದು ಕಠಿಣ. ಉದಾ: ಲೇಖನಿ ಮತ್ತು ಹಾಳೆ ಪರೀಕ್ಷೆಯನ್ನು ಅದರ ಫಲಿತಾಂಶವು ವಿದ್ಯಾರ್ಥಿಗಳು ಹೊಂದಿರುವ ತಪ್ಪುಗ್ರಹಿಕೆಯ ಬಗ್ಗೆ ಚರ್ಚೆಗೆ ಪ್ರಾರಂಭವನ್ನು ನೀಡಿದರೆ ಇದನ್ನು ರಚನಾತ್ಮಕವಾಗಿ ಬಳಸಿಕೊಳ್ಳಬಹುದು. ಹಾಗೆಯೇ ಮುಚ್ಚಿದ ಪ್ರಶ್ನೆಗಳಿಗೆ (closed questions) ನೀಡಿದ ಉತ್ತರಗಳನ್ನು ಕೇವಲ ಅಂಕಗಳಿಗೆ ಬಳಸಿಕೊಂಡಲ್ಲಿ ಅದು ಕೇವಲ ಶಿಕ್ಷಕರಿಗೆ ಮಾತ್ರ ಉಪಯುಕ್ತವಾಗುವುದು, ಈ ರೀತಿಯಾದಾಗ ಇದನ್ನು ನಿರ್ಣಯಾತ್ಮಕವೆಂದು ಕರೆಯಬಹುದು.

# ಮೌಲ್ಯಮಾಪನವನ್ನು ರಚನಾತ್ಮಕವಾಗಿ ಬಳಸಿಕೊಳ್ಳುವುದು

ಸಂಪನ್ಮೂಲ-1 -ಪ್ರಗತಿ ಮತ್ತು ಕಾರ್ಯಕ್ಷಮತೆ /ಪ್ರದರ್ಶನ (Peformance) ನಿಮಗೆ ಸಹಾಯಕವಾಗಬಹುದು. ಇದನ್ನು ನೀವು ನಿಮ್ಮ ಶಿಕ್ಷಕರೊಂದಿಗೆ ನಿಮ್ಮ ಶಾಲೆಯಲ್ಲಿ ಮೌಲ್ಯಮಾಪನದ ಪಾತ್ರ ಮತ್ತು ಶೈಲಿಯ ಬಗ್ಗೆ, ಯಾವ ವಿಧಾನವನ್ನು ಬಳಸಬಹುದು ಎಂಬುದನ್ನು ನೋಡುವಾಗ ಮತ್ತು ಹೇಗೆ ಮೌಲ್ಯಮಾಪನವನ್ನು ತರಗತಿಯ ಅವಿಭಾಜ್ಯ ಚಟುವಟಿಕೆಯನ್ನಾಗಿಸಬಹುದು ಎಂಬ ಬಗ್ಗೆ ಮುಕ್ತ ಚರ್ಚೆಯನ್ನು ಕೈಗೊಳ್ಳುವಾಗ ಹಂಚಿಕೊಳ್ಳಲು ಉಪಯುಕ್ತವಾಗಬಹುದು..

ಆದುದರಿಂದ ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನದ ಮೂರು ಮುಖ್ಯ ವೈಶಿಷ್ಟ್ಯತೆಗಳೆಂದರೆ-

- ಮೌಲ್ಯಮಾಪನದ ಉದ್ದೇಶ.
- ದತ್ತಾಂಶವನ್ನು ಹೇಗೆ ಬಳಸಲಾಯಿತು.
- ಪ್ರಕ್ರಿಯೆಯ ಒಡೆತನ ಯಾರದ್ದು.

ವಿದ್ಯಾರ್ಥಿಗಳು ರಚನಾತ್ಮಕ ಮೌಲ್ಯಮಾಪನದ ಭಾಗೀದರರಾಗಬೇಕೆಂದರೆ, ಅವರು ಸಕ್ರಿಯ ಮತ್ತು ಚಿಂತನಾತ್ಮಕ ಕಲಿಕಾರ್ಥಿಗಳಾಗಿರಬೇಕು, ಹಿಮ್ಮಾಹಿತಿಯನ್ನು ಅವರ ಕಲಿಕೆಯ ಮುಂದಿನ ಹೆಜ್ಜೆಗಳಿಗೆ /ಹಂತಗಳಿಗೆ ಬಳಸಿಕೊಳ್ಳಬೇಕು. ಪ್ರಕರಣ ಅಧ್ಯಯನ-1 ರಲ್ಲಿ ಈ ಬಗ್ಗೆ ಉದಾಹರಣೆಯನ್ನು ನೀಡಲಾಗಿದೆ.



**ಚಿತ್ರ-2 ತರಗತಿಯಲ್ಲಿ ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನದ ಬಳಕೆ.**

## ಪ್ರಕರಣ ಅಧ್ಯಯನ 1: ರವಿ ರಚನಾತ್ಮಕ ಮೌಲ್ಯಮಾಪನವನ್ನು ಪಡೆದಿದ್ದು /ಸ್ವೀಕರಿಸಿದ್ದು

ವಿದ್ಯಾರ್ಥಿ ರವಿಯು ಮತ್ತೊಬ್ಬ ವಿದ್ಯಾರ್ಥಿಯ ಜೊತೆಗೂಡಿ ಒಂದು ಅಧ್ಯಾಯದ ಸಾರಾಂಶವನ್ನು ಪುಸ್ತಕದಲ್ಲಿ ಬರೆಯುತ್ತಿದ್ದಾನೆ. ಆನಂತರ ಅವನು ಈ ಕಾರ್ಯ ಎಷ್ಟು ಸಮಯ ತೆಗೆದುಕೊಂಡಿತು ಹಾಗೂ ಅವರೆಷ್ಟು ಅಸಂಯೋಜಿತರಾಗಿದ್ದರು ಎಂಬುದನ್ನು ಯೋಚಿಸಿದನು. ತನಗೆ ವಹಿಸಿದ ಚಟುವಟಿಕೆಯ ಬಗ್ಗೆ ರವಿ ಗೊಂದಲದಿಂದ ಕೂಡಿದ್ದನು ಹಾಗೂ ಅಧ್ಯಾಯದಲ್ಲಿನ ಕೆಲವು ಮುಖ್ಯ ಪದಗಳನ್ನು ಅವನಿಂದ ಅರ್ಥಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ. ತುಂಬಾ ತಡವಾಗಿ ಶಿಕ್ಷಕರಿಗೆ ಅಧ್ಯಾಯದ ಸಾರಾಂಶವನ್ನು ನೀಡಿದನು, ಅದನ್ನು ನೋಡಿ ಶಿಕ್ಷಕರು ಇದು ಬಹಳ ಸಂಕ್ಷಿಪ್ತವಾಗಿದೆ, ಉತ್ತಮವಾಗಿ ರಚನೆಯಾಗಿಲ್ಲ, ಮತ್ತು ಅಧ್ಯಾಯದಲ್ಲಿನ ಕೆಲವು ಮುಖ್ಯ ಅಂಶಗಳನ್ನು ಬರೆಯಲಾಗಿಲ್ಲ ಎಂದು ಹೇಳಿದರು. ಶಿಕ್ಷಕರು ರವಿಯ ಕಾರ್ಯಕ್ಕೆ ಪ್ರೋತ್ಸಾಹವನ್ನು ನೀಡಿದರೂ ಸಹ. ಹಾಗೆಯೇ ಅವರು ಮುಂದಿನ ಸಾರಾಂಶದಲ್ಲಿ ರವಿಯು ಉತ್ತಮವಾಗಿ ರಚಿಸುವನೆಂದು ಕೂಡ ಒಪ್ಪಿದರು. ರವಿ ಮತ್ತೂ ಪೇಚಾಟಕ್ಕೀಡಾದನು, ಏಕೆಂದರೆ ರವಿಗೆ ತಾನು ಇದಕ್ಕಿಂತ ಉತ್ತಮವಾಗಿ ಮಾಡಬಲ್ಲೆನೆಂದು ಗೊತ್ತಿತ್ತು, ಆದರೆ ಇದೇ ಮೊದಲ ಬಾರಿಗೆ ಅಧ್ಯಾಯದ ಸಾರಾಂಶವನ್ನು ಬರೆದಿದ್ದನು.

ರವಿಗೆ ಕಥೆಯ ಕೆಲವು ಅಂಶವನ್ನು ಬಿಟ್ಟಿದ್ದೇನೆ ಎಂಬ ಅರಿವಿದ್ದಿದುದರಿಂದ, ಸಹಾಯವಾಗಬಹುದೆಂದು ಅವನು ಆ ಪಾಠದಲ್ಲಿನ ಪದಗಳ ಪಟ್ಟಿಯನ್ನು ಸಿದ್ಧಪಡಿಸಿದನು. ಅವನು ತನ್ನ ಅಕ್ಕನಿಗೆ ಅವಳು ಮಾಡಿರುವ ಪಾಠದ /ಅಧ್ಯಾಯದ ಸಾರಾಂಶವನ್ನು ತೋರಿಸಲು ಕೇಳಿದ, ಇದರಲ್ಲಿ ಕೆಲವು ಉತ್ತಮ ಉದಾಹರಣೆಯನ್ನು ನೋಡಬಹುದು ಅಂದುಕೊಂಡ. ಮುಂದಿನ ಹಂತದಲ್ಲಿ ಈ ಕಾರ್ಯದ ಬಗ್ಗೆ ಸ್ಪಷ್ಟತೆಯನ್ನು ಹೊಂದಿರುವ ಬೇರೆ ವಿದ್ಯಾರ್ಥಿಯೊಂದಿಗೆ /ಜೊತೆಗಾರನೊಂದಿಗೆ ಚಟುವಟಿಕೆ ಮಾಡಲು ನಿರ್ಧರಿಸಿದ ಮತ್ತು ಇಬ್ಬರೂ ಸೇರಿ ಒಂದನ್ನೇ ಬರೆಯಲು ಪ್ರಯತ್ನಿಸುವುದಕ್ಕಿಂತ, ಜವಾಬ್ದಾರಿಯನ್ನು ಹಂಚಿಕೊಳ್ಳೋಣ ಎಂದು ಸಲಹೆಯನ್ನು ನೀಡುವೆ ಎಂದುಕೊಂಡನು. ಗೊಂದಲ ತನಗೋ ಅಥವಾ ತನ್ನ ಜೊತೆಗಾರನಿಗೋ ಎಂಬ ಬಗ್ಗೆ ಅವನಿಗೆ ಖಾತರಿಯಿರಲಿಲ್ಲ ಮತ್ತು ಇದನ್ನು ತಿಳಿಯಲು/ ಪರೀಕ್ಷಿಸಲು ಬಯಸಿದನು.

ರವಿ ಕೇವಲ ತನ್ನ ಕಲಿಕೆಯ ಬಗ್ಗೆ ಮಾತ್ರ ಚಿಂತನೆಯನ್ನು ಕೈಗೊಳ್ಳಲಿಲ್ಲ, ಜೊತೆಗೆ ತಾನು ಹೇಗೆ ಮುಂದೆ ಹೇಗೆ ಇದನ್ನು ಉತ್ತಮವಾಗಿ ಮಾಡಬಲ್ಲೆನು ಮತ್ತು ತನ್ನ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಏನು ಮಾಡಬೇಕು ಎಂದು ನೋಡಲು / ಚಿಂತಿಸಲು ಪ್ರಾರಂಭಿಸಿದನು. ಕೇವಲ ಫಲಿತಾಂಶವನ್ನು ಮಾತ್ರ ಗಮನಿಸದೇ ತಾನು ಹೇಗೆ ಕಾರ್ಯ ಮಾಡುತ್ತಿದ್ದೇನೆ ಎಂಬುದನ್ನೂ ಸಹ ಗಮನಿಸಲು ಪ್ರಾರಂಭಿಸಿದನು. ಅವನ ಶಿಕ್ಷಕರು ಅವನಿಗೆ ಕೆಲವು ಉಪಯುಕ್ತ ಹಿಮ್ಮಾಹಿತಿಯನ್ನು (ರಚನಾತ್ಮಕ ಮೌಲ್ಯಮಾಪನ) ನೀಡಿದ್ದಾರೆ ಮತ್ತು ಇದನ್ನು ರವಿಯು ಇದನ್ನು ಮುಂದಿನ ಹಂತದಲ್ಲಿ ಯೋಜಿಸಲು ಬಳಸಿಕೊಂಡನು.

ಒಬ್ಬ ಶಾಲಾ ಶಿಕ್ಷಕರಾಗಿ, ನೀವು ರಚನಾತ್ಮಕ ಮೌಲ್ಯಮಾಪನದ ಜಂಟಿಕಾರ್ಯವನ್ನು, ಕೇವಲ ಸಹಶಿಕ್ಷಕರೊಂದಿಗೆ ಕಾರ್ಯನಿರ್ವಹಿಸುವುದು ಮಾತ್ರವಲ್ಲದೇ, ವಿದ್ಯಾರ್ಥಿಗಳಿಗೆ ಅವರ ಪ್ರಕ್ರಿಯೆಯ ಭಾಗವಾಗಿ ಕಲಿಕೆಯನ್ನು ಮೌಲ್ಯಮಾಪನ ಮಾಡುವಲ್ಲಿನ ಪ್ರಯೋಜನವನ್ನು ತಿಳಿಯಲು ಸಹಾಯಕವಾಗುವಂತೆ ಮಾಡುವ ಮೂಲಕ ಉತ್ತೇಜಿಸಬಹುದು.

ವಿದ್ಯಾರ್ಥಿಗಳು ಕಲಿಕಾರ್ಥಿಗಳಾಗಿ ಸಕ್ರಿಯವಾಗಿ ತೊಡಗಿಕೊಳ್ಳುವಂತೆ ಮಾಡಲು ಶಿಕ್ಷಕರು, ವಿದ್ಯಾರ್ಥಿಗಳು ತಮ್ಮ ಕಲಿಕೆಯ ಪ್ರಕ್ರಿಯೆಯ ಅರಿವನ್ನು ಹೊಂದಿದ್ದಾರೆಯೇ ಮತ್ತು ಅವರು-

- ಚಟುವಟಿಕೆಯ ಬಗ್ಗೆ ಚಿಂತನೆಯನ್ನು ಕೈಗೊಂಡಿದ್ದಾರೆಯೇ,
- ಏನು ನಡೆಯಿತು ಎಂಬುದರ ವಿಶ್ಲೇಷಣೆಯನ್ನು ಪ್ರಾರಂಭಿಸುತ್ತಿದ್ದಾರೆಯೇ,
- ತಮ್ಮ ಕಲಿಕೆಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳುವುದು ಮತ್ತು ಅವರ ಕಲ್ಪನೆ /ಊಹೆ ಮತ್ತು ತೀರ್ಮಾನಗಳನ್ನು ಪರೀಕ್ಷಿಸುತ್ತಿದ್ದಾರೆಯೇ (check) ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ.

ನಿಮ್ಮ ಶಿಕ್ಷಕರಿಗೆ ಹೆಚ್ಚಿನ ಮಾರ್ಗದರ್ಶನವನ್ನು 'ಪ್ರೌಢಶಾಲಾ ಇಂಗ್ಲೀಷ್ ನ- ರಚನಾತ್ಮಕ ಮೌಲ್ಯಮಾಪನದ ಮೂಲಕ ಭಾಷೆಗೆ ಬೆಂಬಲ' ಘಟಕದಲ್ಲಿ ಕಾಣಬಹುದಾಗಿದೆ. (Secondary English unit Supporting Language through Formative Assessment)

# 2. ತರಗತಿಯಲ್ಲಿ ರಚನಾತ್ಮಕ ಮತ್ತು ನಿರ್ಣಯಾತ್ಮಕ ಮೌಲ್ಯಮಾಪನದ ಬಳಕೆ

ಪ್ರಕರಣ ಅಧ್ಯಯನದಲ್ಲಿ-2 ರಲ್ಲಿ, ಹೇಗೆ ಒಬ್ಬ ಶಾಲಾನಾಯಕಿ ಶ್ರೀಮತಿ.ಸಿಲ್ವಾ, ಒಬ್ಬ ಶಿಕ್ಷಕಿಯಾಗಿ ತನ್ನ ಸ್ವಅನುಭವವನ್ನು ಬಳಸಿಕೊಳ್ಳುವ ಮೂಲಕ ಹೇಗೆ ತಮ್ಮ ಶಾಲೆಯಲ್ಲಿ ರಚನಾತ್ಮಕ ಮೌಲ್ಯಮಾಪನವನ್ನು ಪರಿಚಯಿಸಿದರು ಎಂಬುದನ್ನು ಹೇಳುತ್ತದೆ.ಈ ಕೆಳಗೆ ನೀಡಲಾಗಿರುವ 5 ಹಂತಗಳಲ್ಲಿ ತಮ್ಮ ಶಾಲೆಗೆ ರಚನಾತ್ಮಕ ಮೌಲ್ಯಮಾಪನವನ್ನು ಪರಿಚಯಿಸಲು ಕ್ರಮವನ್ನು ಕೈಗೊಂಡಿರುತ್ತಾರೆ.

1. ಶಿಕ್ಷಕರಿಗೆ ರಚನಾತ್ಮಕ ಮೌಲ್ಯಮಾಪನವನ್ನು ಪರಿಚಯಿಸುವುದು.
2. ಶಾಲಾ ನಾಯಕಿ ಶ್ರೀಮತಿ. ಸಿಲ್ವರವರ ತರಗತಿಯ ವೀಕ್ಷಣೆಯ ಮೂಲಕ ಶಿಕ್ಷಕರಿಗೆ ರಚನಾತ್ಮಕ ಮೌಲ್ಯಮಾಪನದ ಬಗ್ಗೆ ಪ್ರಾಯೋಗಿಕ ಅನುಭವ (exposure) ನೀಡುವುದು.
3. ಶ್ರೀಮತಿ. ಸಿಲ್ವರವರ ತರಗತಿ ವೀಕ್ಷಣೆಯ ಅಂಶಗಳ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸುವುದು.
4. ಶಿಕ್ಷಕರು ತಮ್ಮ ತರಗತಿಯಲ್ಲಿ ರಚನಾತ್ಮಕ ಮೌಲ್ಯಮಾಪನ ಬಳಕೆ ಮಾಡುತ್ತಿರುವಾಗ ವೀಕ್ಷಿಸುವುದು.
5. ಪರಿಶೀಲಿಸುವುದು ಮತ್ತು ಚಿಂತನೆಯನ್ನು ಕೈಗೊಳ್ಳುವುದು.

## ಪ್ರಕರಣ ಅಧ್ಯಯನ-2: ಶ್ರೀಮತಿ. ಸಿಲ್ವ ತರಗತಿಯಲ್ಲಿ ರಚನಾತ್ಮಕ ಮೌಲ್ಯಮಾಪನವನ್ನು ಬಳಸುವುದು:

ಶ್ರೀಮತಿ. ಸಿಲ್ವರವರು ತಮ್ಮ ತರಗತಿಯ ಪ್ರತೀ ವಿದ್ಯಾರ್ಥಿಯ, ವಿವಿಧ ಪಾಠಗಳಲ್ಲಿನ ಪ್ರಗತಿಯ ಬಗ್ಗೆ ಟಿಪ್ಪಣಿ ಮಾಡಿಕೊಳ್ಳುವ ಮೂಲಕ ತಮ್ಮ ತರಗತಿಯ ಪ್ರತೀ ವಿದ್ಯಾರ್ಥಿಯ ಕಲಿಕೆಯ ಬಗ್ಗೆ ಮಾಹಿತಿಯನ್ನು (track) ಇಡುತ್ತಾರೆ. ತಮ್ಮ ತರಗತಿಯ ವಿವಿಧ ವಿದ್ಯಾರ್ಥಿಗಳಿಗೆ ಸಮರ್ಪಕವಾದ ಮತ್ತು ಉಪಯುಕ್ತವಾಗುವಂತೆ ಪಾಠಗಳನ್ನು ಮಾಡುತ್ತಾರೆ.ಮತ್ತು ಇದನ್ನು ಪ್ರತೀ ವಿದ್ಯಾರ್ಥಿಯು ಕಲಿಕೆಯಲ್ಲಿ ಎಲ್ಲಿದ್ದಾರೆ ಎಂಬುದನ್ನು ತಿಳಿದುಕೊಂಡರೆ ಮಾತ್ರ ಮಾಡಬಹುದು ಎಂಬ ಎಂಬುದನ್ನು ತಿಳಿದುಕೊಂಡರೆ ಮಾತ್ರ ಮಾಡಬಹುದು ಎಂಬ ಅರಿವು ಅವರಿಗಿದೆ.ತಮ್ಮ ಅನುಭವದಲ್ಲಿ ಅವರು ಹೆಚ್ಚು ಮಾತನಾಡುವ ವಿದ್ಯಾರ್ಥಿಗಳು ಹೆಚ್ಚು ಪ್ರತಿಭಾವಂತರು ಎಂದು ಊಹೆಯನ್ನು/ ಕಲ್ಪನೆಯನ್ನು

ಮಾಡಬಾರದೆಂಬುದನ್ನು ಕಲಿತಿರುವರು.ಆದುದರಿಂದ ಅವರು ಸುಮ್ಮನಿರುವ /ಮಾತನಾಡದ, ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಉತ್ತೇಜಿಸುವುದನ್ನು ಹಾಗೂ ಅವರು ಏಳಿಗೆಯಾಗುವುದನ್ನು ಕಾಣುವುದನ್ನು ಪ್ರೀತಿಸುತ್ತಾರೆ.

ಅವರು, ವಿದ್ಯಾರ್ಥಿಗಳು ಅವರಿಗೆ ನೀಡಿರುವ ವಿವಿಧ ಚಟುವಟಿಕೆಗಳಲ್ಲಿ ಏನು ಮಾಡುತ್ತಿದ್ದರು ಎಂಬುದನ್ನು ಕೆಲವು ನಮೂನೆಗಳಲ್ಲಿ ದಾಖಲಿಸಿಕೊಳ್ಳುವುದು ಮತ್ತು ಪ್ರತಿ ವಿದ್ಯಾರ್ಥಿಗೆ ಅವರ ಕಲಿಕೆ ಮತ್ತು ಪ್ರಗತಿಯ ಬಗ್ಗೆ ಹಿಮ್ಮಾಹಿತಿ ನೀಡುವುದರಲ್ಲಿ ವಿಶ್ವಾಸವನ್ನು ಹೊಂದಿದ್ದಾರೆ. ಈ ದಾಖಲೆ ಮತ್ತು ವಿಶ್ಲೇಷಣೆಯ ಆಧಾರವಾಗಿ ತಮ್ಮ ವಿದ್ಯಾರ್ಥಿಗಳ ಕಲಿಕೆ ಉತ್ತಮವಾಗುವಂತೆ ಏನು ಮಾಡಬಹುದೆಂದು ಯೋಜಿಸುವರು.

ಇತ್ತೀಚೆಗೆ ಅವರಿಗೆ ಶಾಲಾ ನಾಯಕಿಯಾಗಿ ಬಡ್ತಿಯಾಗಿದೆ, ಶ್ರೀಮತಿ. ಸಿಲ್ವರವರು ಉಳಿದ ಮೂವರು ಸಹೋದ್ಯೋಗಿಗಳೂ ಸಹ ತಮ್ಮ ವಿದ್ಯಾರ್ಥಿಗಳ ಪೂರ್ವಕಲಿಕೆಗೆ ಅನುಗುಣವಾಗಿ ಯೋಜನೆ ತಯಾರಿಸುವುದು ಹಾಗೂ ಅದರ ಆಧಾರವಾಗಿ ತಮ್ಮ ಬೋಧನೆಯಲ್ಲಿ ಮಾರ್ಪಾಡು ಮಾಡಿಕೊಳ್ಳುವಂತೆ ಮಾಡುವಲ್ಲಿ ಹೆಚ್ಚು ಗಮನವನ್ನು ನೀಡಿದ್ದಾರೆ. ಇದು ಅವರ ನಿಲುವಿನ ಬಗ್ಗೆ ಅವರು ಹೇಳಿದ ಅಂಶಗಳು.

## ಹಂತ: 1 – ಶಿಕ್ಷಕರಿಗೆ ರಚನಾತ್ಮಕ ಮೌಲ್ಯಮಾಪನವನ್ನು ಪರಿಚಯಿಸುವುದು

ನಾನು ತರಗತಿಯಲ್ಲಿ ಕಲಿಕೆಯನ್ನು ಪರೀಕ್ಷಿಸುವ ಬಗ್ಗೆ ಮಾತನಾಡಲು ಪ್ರಾರಂಭಿಸಿದಾಗ ಮತ್ತು ನಮ್ಮ ದೊಡ್ಡ ಮತ್ತು ವಿವಿಧತೆಯಿಂದ ಕೂಡಿದ ತರಗತಿಗಳಲ್ಲಿ ಬೋಧಿಸುವಾಗ ಇದನ್ನು ಹೇಗೆ ಬಳಸಬಹುದು ಎಂದು ಹೇಳುವಾಗ ಎಲ್ಲರ ಮುಖದಲ್ಲಿ ಶೂನ್ಯ ಭಾವವಿತ್ತು.

ಶಿಕ್ಷಕರು ವಿವಿಧ ಕಲಿಕಾಹಂತಗಳಲ್ಲಿರುವ ವಿದ್ಯಾರ್ಥಿಗಳಿಗೆ ಒಂದು ಪಾಠವನ್ನು ಬೋಧಿಸುವುದು ಎಷ್ಟು ಕಷ್ಟ ಎಂಬುದನ್ನು ಹೇಳಲು ಸಿದ್ದರಿದ್ದರು ಆದರೆ, ಅವರು ವಿದ್ಯಾರ್ಥಿಗಳ ಕಲಿಕಾ ಹಂತಗಳ ಅರಿವು ಪ್ರಸ್ತುತ ಕಲಿಕೆಯ ಬಗ್ಗೆ ಸ್ಪಷ್ಟತೆಯಿದ್ದಲ್ಲಿ ಎಷ್ಟು ಪರಿಣಾಮಕಾರಿಯಾಗಿ ಕಲಿಸಬಹುದು ಎಂಬುದನ್ನು ಗುರುತಿಸಿರಲಿಲ್ಲ. ಾದುದರಿಂದ ನಾನು ರಚನಾತ್ಮಕ ಮೌಲ್ಯಮಾಪನದ ಮತ್ತು ಇದು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಿವಲ್ಲಿ ಹೇಗೆ ಸಹಾಯಕ ಎಂಬುದನ್ನು ಹೇಳಲು ಪ್ರಾರಂಭಿಸಿದೆ.

## ಹಂತ: 2 – ರಚನಾತ್ಮಕ ಮೌಲ್ಯಮಾಪನಕ್ಕೆ ಶಿಕ್ಷಕರಿಗೆ ಪ್ರಾಯೋಗಿಕ ಅನುಭವನ್ನು ನೀಡುವುದು: ಶಾಲಾ ನಾಯಕರು ನೀಡಿದ ತರಗತಿಯನ್ನು ಅವಲೋಕಿಸುವುದು

ಕೇವಲ ಇದರ ಬಗ್ಗೆ ಮಾತನಾಡುವುದರ ಮೂಲಕ  ಅವರ ಮನವೊಲಿಸುವುದು ಸಾಧ್ಯವಿಲ್ಲ ಎಂಬ ಅಂಶ ನನಗೆ ಅರಿವಾಯಿತು. ಆದ್ದರಿಂದ ನಾನು ಹೇಳುವುದನ್ನು ತೋರಿಸಲು ಅವರಿಗೆ ನನ್ನ ತರಗತಿಗೆ ಆಹ್ವಾನಿಸಿದೆ.ನಾನು ಅವರಿಗೆ ಮೌಲ್ಯಮಾಪನವನ್ನು ಕೈಗೊಳ್ಳಲಾದ ವಿವಿಧ ವಿಧಾನಗಳನ್ನು ಬರೆದುಕೊಳ್ಳಲು ಹಾಗೂ ಎಷ್ಟು ಬಾರಿ ಕೈಗೊಳ್ಳಲಾಯಿತು ಎಂಬ ಅಂಶವನ್ನು ಬರೆದುಕೊಳ್ಳಲು ಹೇಳಿದೆ.ಇದು ನಾನು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುತ್ತಿರಬಹುದು, ವಿದ್ಯಾರ್ಥಿಗಳು ಸ್ವತಃ ತಾವು ಅಥವಾ ಪರಸ್ಪರ ಮೌಲ್ಯಮಾಪನ ಮಾಡಿಕೊಳ್ಳುತ್ತಿರುವಂತಹುದಾಗಿರಬಹುದು ಎಂದು ಸಲಹೆಯನ್ನು ನೀಡಿದೆ. ಮೌಲ್ಯಮಾಪನವನ್ನು ಹೇಗೆ ದಾಖಲೀಕರಿಸಿಕೊಳ್ಳಲಾಯಿತು (ಆಗಲಿಲ್ಲ) ಮತ್ತು ನಾನು ಹೇಗೆ ಮೌಲ್ಯಮಾಪನವನ್ನು ನನ್ನ ಬೋಧನೆಯಲ್ಲಿ ಹೇಗೆ ಬಳಸಿಕೊಂಡೆ ಉದಾ: ಯಾವ ಪ್ರಶ್ನೆಗಳನ್ನು ಕೇಳಿದೆ, ಯಾವ ವಿಮರ್ಶೆ/ಏನು ಹೇಳಿದೆ, ಮತ್ತು ಯಾವ ಉದಾಹರಣೆಗಳನ್ನು ಬಳಸಿದೆ ಎಂಬುದನ್ನು ಬರೆದುಕೊಳ್ಳಲು ನನ್ನ ಶಿಕ್ಷಕರಿಗೆ ಹೇಳಿದೆ.

ಶಿಕ್ಷಕರಿಗೆ. ನಾನು ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಮಧ್ಯದಲ್ಲಿ ಸಿಲುಕಿದಾಗ (stuck), ಅವರಿಗೆ ಸಹಾಯ ಮಾಡಲು ನಾನು ಏನು ಹೇಳಿದೆ ಹಾಗೂ ಸಮಯಕ್ಕೆ ಸರಿಯಾಗಿ ನಾನು ಹೇಗೆ ಹಿಮ್ಮಾಹಿತಿಯನ್ನು ನೀಡಿದೆ ಎಂಬುದನ್ನು ಮುಖ್ಯವಾಗಿ ಬರೆದುಕೊಳ್ಳಲು ತಿಳಿಸಿದೆ. ಇದನ್ನು ವಿದ್ಯಾರ್ಥಿಗಳು ಮಾಡುತ್ತಿರುವ ಕಾರ್ಯವನ್ನು ಉತ್ತಮವಾಗಿ ಮಾಡುವಲ್ಲಿ ಸಹಕರಿಸುವಂತಹ ಹಿಮ್ಮಾಹಿತಿಯನ್ನು ಆಗಿಂದಾಗ್ಗೆ / ತಕ್ಷಣವೇ ನೀಡುವ ಅಗತ್ಯತೆ ಮತ್ತು ಮಹತ್ವವನ್ನು ಶಿಕ್ಷಕರಿಗೆ ಮನವರಿಕೆ ಮಾಡಿಕೊಡಲು ಹೇಳಿದೆ.

## ಹಂತ: 3–ಶಿಕ್ಷಕರೊಂದಿಗೆ ಶಾಲಾ ನಾಯಕರ ತರಗತಿ ಬೋಧನಾ ಅವಲೋಕನಕ್ಕೆ ಸಂಬಂಧಿಸಿದಂತೆ ಚರ್ಚೆ

ನಾವು ಸಭೆಯನ್ನು ಸೇರಿ ಬೋಧನಾ ಮತ್ತು ಕಲಿಯುವಿಕೆಯ ಭಾಗವಾಗಿ ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಕೈಗೊಂಢ ರೀತಿಯ ಬಗ್ಗೆ ಚರ್ಚೆ ಮಾಡಿದೆವು. ಇದರಲ್ಲಿ ಶಿಕ್ಷಕರಿಗೆ ಅಚ್ಚರಿ ತಂದ ವಿಷಯವೆಂದರೆ ಶಿಕ್ಷಕಿಯಾದ ನನ್ನ ಪಾತ್ರವನ್ನು ಅವರು ತೆಗೆದುಕೊಂಡಂತೆ- ತರಗತಿಯಲ್ಲಿ ನಾನು ಜೊತೆ ಕೆಲಸದಲ್ಲಿ ಒಬ್ಬ ವಿದ್ಯಾರ್ಥಿಗೆ ತನ್ನ ಭಾಗೀದಾರಳನ್ನು ಮೌಲ್ಯಮಾಪನ ಮಾಡಲು ಹೇಳಿದ್ದು ಮತ್ತು ಗುಂಪು ಚಟುವಟಿಕೆಯಲ್ಲಿ ಪರಸ್ಪರ ಮೌಲ್ಯಮಾಪನ ಮಾಡಿಕೊಂಡು ಹಿಮ್ಮಾಹಿತಿಯನ್ನು ನೀಡಲು ಹೇಳಿದುದು.

ಈ ಚರ್ಚೆ ಅವರು ತಮ್ಮ ತರಗತಿಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನ ಮಾಡಲು ಕೇಳಬಹುದಾದ ಪ್ರಶ್ನೆಗಳ ಪಟ್ಟಿಯನ್ನು ಚರ್ಚಿಸುವ ಮಟ್ಟಿಗೆ ವಿಸ್ತೃತಗೊಂಡಿತು.ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳಿಗೆ ಒತ್ತಡವನ್ನು ತರುವ ಅಥವಾ ವಿಚಾರಣೆ ಮಾಡುವ ಭಾವನೆಯನ್ನು ಉಂಟು ಮಾಡದಂತಹ, ಬೆಂಬಲಾತ್ಮಕ ರೀತಿಯಲ್ಲಿ ಬಳಸಬೇಕು ಎಂಬುದರ ಬಗ್ಗೆ ನನ್ನ ಹೆಚ್ಚಿನ ಗಮನವಿತ್ತು. , ಒಬ್ಬ ವಿದ್ಯಾರ್ಥಿಯಿಂದ ಪ್ರಶ್ನೆಗೆ ಉತ್ತರ ನೀಡಲು ಸಾಧ್ಯವಾಗದಿದ್ದಾಗ, ಪ್ರಶ್ನೆ ಮುಂದಿನ ವಿದ್ಯಾರ್ಥಿಗೆ ಹೋಗಬೇಕು, ಆದರೆ ಯಾವುದೋ ಒಂದು ವಿಷಯ ಸರಿಯಾಗಿ ಅರ್ಥವಾಗಿಲ್ಲ ಎಂಬುದನ್ನು ನೋಟ್ / ದಾಖಲೀಕರಿಸಿಕೊಳ್ಳಬೇಕು.

## ಹಂತ: 4–ಶಿಕ್ಷಕರು ತಮ್ಮ ತರಗತಿಗಳಲ್ಲಿ ರಚನಾತ್ಮಕ ಮೌಲ್ಯಮಾಪನವನ್ನು ಅಭ್ಯಸಿಸುವುದನ್ನು/ ಬಳಸುವುದನ್ನು ಅವಲೋಕಿಸುವುದು

ಮುಂದಿನ ಒಂದು ತಿಂಗಳ ಅವಧಿಯನ್ನು ತರಗತಿಯನ್ನು ಅವಲೋಕಿಸಲು ನನಗೆ ಆಹ್ವಾನವನ್ನು ನೀಡುವಂತೆ ನಾನೇ ಕೇಳಿಕೊಂಡೆ.ಶಿಕ್ಷಕರಿಗೆ ಅವರ ಆಲೋಚನೆಯನ್ನು ಅಭ್ಯಸಿಸಲು ಸಮಯಾವಕಾಶದ ಅಗತ್ಯತೆಯಿತ್ತು.ನಾನು ಎಲ್ಲಾ ತರಗತಿಯಲ್ಲಿ ನಡೆದ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಿಲ್ಲದಿದುದರಿಂದ, ನನ್ನ ಅವಲೋಕನದ ಅಂಶಗಳನ್ನು ಬರೆದಿಟ್ಟುಕೊಳ್ಳುತ್ತೇನೆಂದು ಅವರಿಗೆ ತಿಳಿಸಿದೆ. ಅವರ ತರಗತಿಯನ್ನು ಅವಲೋಕಿಸುವಾಗ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚುವ ಹಾಗೂ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳು ಏನನ್ನು ಅರ್ಥ ಮಾಡಿಕೊಂಡಿದ್ದಾರೆ ಎಂದು ತಿಳಿಯಲು ಸಹಾಯಕವಾಗುವ ಪ್ರಶ್ನೆಗಳನ್ನು ಕೇಳುತ್ತಿದ್ದುದನ್ನು ನೋಡಿ ಹರ್ಷಿತಳಾದೆ. ವಿದ್ಯಾರ್ಥಿಗಳು ಯಾವುದಾದರು ಅಂಶದಲ್ಲಿ ಸಿಲುಕಿದಾಗ ಸಹಾಯಕವಾಗುವಂತಹ ಹಿಮ್ಮಾಹಿತಿಯನ್ನು ನೀಡುತ್ತಿದ್ದುದನ್ನು ನೋಡಿದೆ.ಹೆಚ್ಚಿನ ತರಗತಿಗಳಲ್ಲಿ ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ತೊಡಗಿದ್ದುದು ಹಾಗೂ ಪ್ರತಿಕ್ರಿಯಿಸಲು ಸಿದ್ದರಿದ್ದರು.

## ಹಂತ: 5- ಪರಿಶೀಲನೆ ಮತ್ತು ಚಿಂತನೆ

ಅವಲೋಕನದ ನಂತರ ನಾವು ಈ ಮೊದಲು ಸಿದ್ದಪಡಿಸಿದ್ದ ಪ್ರಶ್ನೆಗಳಿಗೆ ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಸೇರಿಸಿ ಮಾರ್ಪಡಿಸಿದೆವು. ಶಿಕ್ಷಕರೊಂದಿಗಿನ ಚರ್ಚೆಯಲ್ಲಿ ನಾವು-

- ಎದುರಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿದೆವು.
- ಏನನ್ನು ಮತ್ತು ಹೇಗೆ ತಮ್ಮ ತರಗತಿಗಳಲ್ಲಿ ಮೌಲ್ಯಮಾಪನವನ್ನು ಕೈಗೊಳ್ಳಲಾಯಿತು ಹಾಗೂ ವಿದ್ಯಾರ್ಥಿಗಳಿಗೆ ಬೆಂಬಲ ನೀಡಲು ಯಾವುದರ ಅಗತ್ಯತೆಯಿದೆ ಎಂಬುದನ್ನು ನಿರ್ಧರಿಸಲಾಯಿತು ಎಂಬುದರ ಬಗ್ಗೆ ಅನುಭವವನ್ನು ಹಂಚಿಕೊಳ್ಳಲಾಯಿತು.
- ವೈಯಕ್ತಿಕ ಬೋಧನೆ/ಕಲಿಕಾ ಯೋಜನೆಗಳನ್ನು ಮಾರ್ಪಡಿಸಲಾಯಿತು.
- ಹೊಸ ಯೋಜನೆಯನ್ನು ಪರಸ್ಪರ ಹಂಚಿಕೊಳ್ಳಲಾಯಿತು.

ಒಬ್ಬ ಶಿಕ್ಷಕಿ, ಶ್ರೀಮತಿ ಮೆಹೆತಾ, ಈ ಚರ್ಚೆಯಲ್ಲಿ ಒಂದು ಆಲೋಚನೆಯನ್ನು/ಉಪಾಯವನ್ನು ಹೇಳಿದರು, ನಂತರದಲ್ಲಿ ಹೆಚ್ಚಿನ ಶಿಕ್ಷಕರು ಇದನ್ನು ತಮ್ಮ ತರಗತಿಗಳಲ್ಲಿ ಬಳಸಿಕೊಂಡರು.ಆಕೆ ತಮ್ಮ ಗಣಿತ ತರಗತಿಯಲ್ಲಿ ಮೋಜಿನ ವಿಧಾನದ ಮೂಲಕ ವಿದ್ಯಾರ್ಥಿಗಳನ್ನು ಹೇಗೆ ಮೌಲ್ಯಮಾಪನ ಮಾಡಿದರು ಎಂಬುದನ್ನು ಹೇಳಿದರು. ವಿದ್ಯಾರ್ಥಿಗಳಿಗೆ ಯಾವುದಾದರೂ ಕಲ್ಪನೆ ಅರ್ಥವಾಗದಿದ್ದಲ್ಲಿ ತಮ್ಮ ಬಿಡಿಸಿದ ಕೈಯನ್ನು

ಎತ್ತಲು ಹಾಗೂ ಅರ್ಥವಾಗಿದ್ದಲ್ಲಿ, ಆತ್ಮವಿಶ್ವಾಸ ಹೊಂದಿದ್ದಲ್ಲಿ ಮುಷ್ಟಿಯೊಂದಿಗೆ ಕೈಯನ್ನು ಎತ್ತಲು ತಿಳಿಸಲಾಯಿತು. ಅವರು ತಮ್ಮ ಪಾಠದ ಯಾವುದೇ ಸಂಧರ್ಭದಲ್ಲಿ ಅಥವಾ ತಕ್ಷಣ ಮುಂದಿನ ಹಂತಕ್ಕೆ ಹೋಗುವುದನ್ನು ನಿಧಾನವಾಗಿಸಲು ಮೌಲ್ಯಮಾಪನವನ್ನು ಬಳಸಿಕೊಂಡರು. ವಿದ್ಯಾರ್ಥಿಗಳು ಕೈಯನ್ನು ತೆರೆಯುವ ಅಥವಾ ಮುಚ್ಚುವ ವಿಧಾನದ ಜೊತೆಗೆ ಅವರು ಕಲಿಕೆಯಲ್ಲಿ ಹತ್ತಿರವಿರುವುದನ್ನು ಸೂಚಿಸುವಂತಹ ಮತ್ತೊಂದು ಚಿಹ್ನೆಯನ್ನು ಹೇಳಿಕೊಡಲು ಸಹ ಕೇಳಿದ್ದರು! ನಮ್ಮಲ್ಲಿ ಹಲವರು ಈ ವಿಧಾನವನ್ನು ಬಳಸುತ್ತಿದ್ದೇವೆ, ಕೆಲವೊಮ್ಮೆ ವಿದ್ಯಾರ್ಥಿಗಳು ಕೇಳದಿದ್ದಾಗಲೂ ಸಹ ಕೈಯನ್ನು ಮೇಲೆತ್ತುವುದು ಸಹ ಕಂಡುಬಂದಿದೆ.

ಶ್ರೀಮತಿ.ಮೆಹೆತಾರವರ ಈ ತಕ್ಷಣದ, ಉಪಯುಕ್ತವಾದ ತಂತ್ರವಿದ್ಯಾರ್ಥಿಗಳು ತಮಗೆ ನೀಡಿದ ಕಾರ್ಯವನ್ನು ಅರ್ಥಮಾಡಿಕೊಂಡಿದ್ದೇವೆಯೇ/ಇಲ್ಲವೇ ಎಂಬುದನ್ನು ತಿಳಿಸಲು ಅನುವು ಮಾಡಿಕೊಡುತ್ತಿದೆ. ಆದರೂ ಸಹ ನಾಯಕರಾಗಿ ನೀವು ಈ ಉಪಾಯವನ್ನು ರಚನಾತ್ಮಕವಾಗಿ ಉಪಯೋಗಿಸಬೇಕಿದ್ದಲ್ಲಿ ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಳ್ಳುವುದು ಉತ್ತಮ-

- ವಿದ್ಯಾರ್ಥಿಗಳಿಗೆ ಅವರು ಯಾವುದರ ಬಗ್ಗೆ ಕಾರ್ಯ ನಿರ್ವಹಿಸುತ್ತಿದ್ದಾರೆಂಬುದು ತಿಳಿದಿದೆಯೇ? ತಾವು ಎಷ್ಟರ ಮಟ್ಟಿಗೆ ಸಾಧನೆ ಮಾಡಿದ್ದಾರೆ ಎಂಬುದನ್ನು ತಮಗೆ ತಾವೇ ನಿರ್ಧರಿಸಿಕೊಳ್ಳಲು ಮಾನದಂಡಗಳನ್ನು ಹೊಂದಿದ್ದಾರೆಯೇ? ಶ್ರೀಮತಿ ಮೆಹೆತಾರವರ ಪ್ರಕರಣದಲ್ಲಿ ವಿದ್ಯಾರ್ಥಿಗಳು ಕಲಿಯಬೇಕಾದ ಕೌಶಲ್ಯಗಳ ಪಟ್ಟಿಯನ್ನು ಬೋರ್ಡ್ನ ಮೇಲೆ ಬರೆದಿರಬಹುದು ಅಥವಾ ಅವರು ಕಲಿಯುತ್ತಿರುವ ಗಣಿತದ ಅಂಶವನ್ನು ಅರ್ಥ ಮಾಡಿಕೊಂಡು ಬಗೆಹರಿಸಬೇಕಾದಂತಹ ಗಣಿತದ ಕಠಿಣ ಸಮಸ್ಯೆಯನ್ನು ನೀಡಬಹುದು. ಆಗ ವಿದ್ಯಾರ್ಥಿಗಳು ತಾವು ಆ ಕೌಶಲ್ಯವನ್ನು ಬಳಸಬಲ್ಲರೇ ಅಥವಾ ಸಮಸ್ಯೆಯನ್ನು ಬಗೆಹರಿಸಬಲ್ಲರೇ ಎಂಬುದನ್ನು ನಿರ್ಧರಿಸಬಲ್ಲರು.
- ಮೌಲ್ಯಮಾಪನದ ಫಲಿತಾಂಶವಾಗಿ ಏನಾಯಿತು? ಮೌಲ್ಯಮಾಪನದಲ್ಲಿ ಕಂಡು ಬಂದಂತಹ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮುಂದಿನ ಕಲಿಕಾ ಚಟುವಟಿಕೆಯನ್ನು ಮಾರ್ಪಡಿಸಿದಾಗ ಮೌಲ್ಯಮಾಪನವು ಕೇವಲ ರಚನಾತ್ಮಕವಾಗಿರುತ್ತದೆ. ಶ್ರೀಮತಿ. ಮೆಹೆತಾ ವಿದ್ಯಾರ್ಥಿಗಳ ಕಲಿಕೆ ನಿರೀಕ್ಷಿತ ರೀತಿಯಲ್ಲಿಲ್ಲದಿದ್ದಾಗ ಅವರ ಬೋಧನೆಯನ್ನು ನಿಧಾನಗೊಳಿಸಿದರು. ಆದರೆ ಕೆಲವೊಮ್ಮೆ ಶಿಕ್ಷಕರು ವಿದ್ಯಾರ್ಥಿಗಳ ಪ್ರಗತಿಯನ್ನು ಮುಂದುವರೆಸುವುದಕ್ಕೆ ಅನುವು ಮಾಡಿಕೊಡುವಂತಹ ವಿವಿಧ ಆಲೋಚನೆ/ ಉಪಾಯಗಳನ್ನು ಹೊಂದಿರಬೇಕಾಗಿರುತ್ತದೆ.

## 3. ನಿಮ್ಮ ಶಾಲೆಯಲ್ಲಿ ಮೌಲ್ಯಮಾಪನದ ಅಭ್ಯಾಸ

ವಿದ್ಯಾರ್ಥಿಗಳಿಗೆ ಕಲಿಕೆಯ ಕೌಶಲ್ಯಕ್ಕಾಗಿ ಮೌಲ್ಯಮಾಪನವನ್ನು ಅಭಿವೃದ್ಧಿಪಡಿಸಲು ಬೆಂಬಲವನ್ನು ನೀಡಬೇಕು. ಇದನ್ನು ಮಾಡಲು ಶಾಲಾ ನಾಯಕರು ಹಾಗೂ ಶಿಕ್ಷಕರು-

- ಕಲಿಕೆಗಾಗಿ ಮೌಲ್ಯಮಾಪನದ ಸಿದ್ಧಾಂತಗಳನ್ನು ಅರ್ಥಮಾಡಿಕೊಂಡಿರಬೇಕು.
- ತರಗತಿ ಚಟುವಟಿಕೆಗಳು ಮೂಲಕ ಈ ಕೌಶಲ್ಯಗಳನ್ನು ಹೇಗೆ ಬೆಳೆಸಬಹುದು ಮತ್ತು ಈ ಚಟುವಟಿಕೆಗಳು ವಿದ್ಯಾಥಿಗಳಿಗೆ ಹಿಮ್ಮಾಹಿತಿಯನ್ನು ನೀಡಲು ಮತ್ತು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಬೇಧನೆ ಮತ್ತು ಕಲಿಕೆಯನ್ನು ಯೋಜಿಸಲು ಹೇಗೆ ಅವಕಾಶವನ್ನು ಒದಗಿಸುತ್ತದೆ ಎಂಬುದನ್ನು ತಿಳಿದಿರಬೇಕು.

ನಿಮ್ಮ ಶಾಲೆಯಲ್ಲಿ ಇದನ್ನು ಅನ್ವಯಿಸುವ / ಅಳವಡಿಸಿಕೊಳ್ಳುವ ಮೊದಲು ಪ್ರಸ್ತುತ ಏನಾಗುತ್ತಿದೆ ಹಾಗೂ ಶಿಕ್ಷಕರು ಮೌಲ್ಯಮಾಪನದ ಬಗ್ಗೆ ಹೊಂದಿರುವ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳುವ ಅಗತ್ಯತೆಯಿದೆ. ಮುಂದಿನ ಚಟುವಟಿಕೆಯ ಪ್ರಸ್ತುತ ನಿಮ್ಮ ಶಾಲೆಯ ಪಾಠಗಳಲ್ಲಿ ಯಾವ ಬಗೆಯ ಮೌಲ್ಯಮಾಪನವನ್ನು ಕೈಗೊಳ್ಳಲಾಗುತ್ತಿದೆ ಎಂಬುದನ್ನು ತಿಳಿಯಲು ಸಹಾಯ ಮಾಡುವ ಉದ್ದೇಶವನ್ನು ಹೊಂದಿದೆ, ಇದರಿಂದ ನೀವು ನಿಮ್ಮ ಶಿಕ್ಷಕರು ತರಗತಿಯಲ್ಲಿ ಮೌಲ್ಯಮಾಪನ ಮಾಡಲು ಸೃಜನಾತ್ಮಕ ತಂತ್ರಗಳನ್ನು ಅಳವಡಿಸಿಕೊಳ್ಳುವಂತೆ ಮಾಡಬಹುದು.

## ಚಟುವಟಿಕೆ-2 : ನಿಮ್ಮ ಶಾಲೆಯಲ್ಲಿ ಮೌಲ್ಯಮಾಪನದ ಅಭ್ಯಾಸವನ್ನು ವೀಕ್ಷಿಸುವುದು

ಗರಿಷ್ಠ ಐದು ಮಂದಿ ಶಿಕ್ಷಕರಿಗೆ ಆ ವಾರದಲ್ಲಿ ತಾವು ಬಳಸಿರುವ ಒಂದು ಮೌಲ್ಯಮಾಪನದ ಕಾರ್ಯವನ್ನು ವಿವರಿಸಲು ಹೇಳಿರಿ. ಈ ಮೌಲ್ಯಮಾಪನದಿಂದ ವಿದ್ಯಾರ್ಥಿಗಳ ಬಗ್ಗೆ ಅವರೇನು ಕಲಿತರು ಹಾಗೂ ವಿದ್ಯಾರ್ಥಿಗಳು ಅದರಿಂದ ಏನನ್ನು ಕಲಿತರು ಎಂಬುದನ್ನು ಕೇಳಿರಿ.

ಯಾವ ಬಗೆಯ ಮೌಲ್ಯಮಾಪನಾ ವಿಧಾನವನ್ನು ಅನುಸರಿಸಿದರು ಎಂಬುದನ್ನು ತಿಳಿಯಲು, ಅವರು ಹೆಚ್ಚು ವಿವರಣೆ ನೀಡುವಂತೆ ಮಾಡಲು, ಯಾವಾಗ ಅವರು ವಿದ್ಯಾರ್ಥಿಗಳಿಗೆ ಅವರು ನೀಡಿದ ತಕ್ಷಣದ ಮೌಲ್ಯಮಾಪನದ ಹಿಮ್ಮಾಹಿತಿಯನ್ನು ನೀಡಿದರು ಅಥವಾ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ಸಹಾಯಕವಾಗುವಂತೆ ಕಲಿಕಾ ಕಾರ್ಯವನ್ನು ಮಾರ್ಪಡಿಸಿಕೊಂಡ ಉದಾಹರಣೆಯನ್ನು ವಿವರಿಸಲು ಕೇಳಬಹುದು. ಇದು ನಿಮ್ಮ ಶಿಕ್ಷಕರು ಪ್ರಜ್ಞಾಪೂರ್ವಕವಾಗಿಲ್ಲದೆಯೂ ರಚನಾತ್ಮಕ ಮೌಲ್ಯಮಾಪನವನ್ನು ಬಳಸುತ್ತಿದ್ದಾರೆಯೇ ಎಂಬುದನ್ನು ನಿರ್ಧರಿಸಲು ಸಹಾಯಕ.

ಈ ಸಂಭಾಷಣೆಯು ಪೂರ್ಣವಾದ ಮೇಲೆ, ನಿಮ್ಮ ಕಲಿಕಾ ಪುಸ್ತಕದಲ್ಲಿ (learning diary) ಬರೆದುಕೊಂಡ ಟಿಪ್ಪಣಿಯನ್ನು ಮುಂದಿರಿಸಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ನೀಡಿರಿ-

- ಯಾವ ವಿಧದ ಮೌಲ್ಯಮಾಪನವು ತೀರಾ ಸಾಮಾನ್ಯವಾಗಿ ಬಳಕೆಯಾಗಿದೆ?
- ರಚನಾತ್ಮಕ ಮೌಲ್ಯಮಾಪನ ಕೈಗೊಳ್ಳಲಾಗುತ್ತಿದೆ ಎಂಬುದಕ್ಕೆ ಯಾವುದಾದರೂ ಸಾಕ್ಷಾಧಾರಗಳಿವೆಯೇ? ಇದ್ದರೆ ಉದಾಹರಣೆ ನೀಡಿರಿ.
- ಶಿಕ್ಷಕರು ವಿದ್ಯಾರ್ಥಿಗಳು ಮೌಲ್ಯಮಾಪನಾ ಹಿಮ್ಮಾಹಿತಿಯಿಂದ ಕಲಿಯಬೇಕು ಎಂಬ ಸ್ಪಷ್ಟ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆಯೇ? ಅವರ ವಾಕ್ಯಗಳಲ್ಲಿ, ಕಲಿಕೆಗಾಗಿ ಮೌಲ್ಯಮಾಪನದ ಪಾತ್ರವನ್ನು ಕಲಿಕೆಯ ಮೌಲ್ಯಮಾಪನದ ವಿರುದ್ಧವಾಗಿ ಅರ್ಥಮಾಡಿಕೊಂಡಿದ್ದಾರೆಯೇ?
- ಹೇಗೆ ನೀವು, ಶಿಕ್ಷಕರು ಚರ್ಚಿಸಿದ ಮೌಲ್ಯಮಾಪನದ ಉದ್ದೇಶವನ್ನು ಅಥವಾ ಬಳಕೆಯನ್ನು ರಚನಾತ್ಮಕವಾಗಿರುವಂತೆ ಮಾಡಲು ಬದಲಾವಣೆ ಮಾಡಲು ಸಲಹೆಯನ್ನು ನೀಡುವಿರಿ?

**ಚರ್ಚೆ:-**

ನಿಮ್ಮ ಶಾಲೆಯಲ್ಲಿರುವ ಶಿಕ್ಷಕರ ಹಿನ್ನಲೆ ಮತ್ತು ಪಠ್ಯಕ್ರಮವನ್ನು ಸಿಬ್ಬಂದಿಗಳು ವಿವರಿಸಿದ ಬಗೆಯ ಆಧಾರವಾಗಿ, ವಿವಿಧ ಬಗೆಗಿಂತ, ಒಂದೇ ಬಗೆಯ ಮೌಲ್ಯಮಾಪನಾ ವಿಧಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರಬಹುದು. ಹಾಗೂ ಅವರ ಉತ್ತರಗಳು ನೀವು ಅವರಿಂದ ಏನನ್ನು ಅಪೇಕ್ಷಿಸುತ್ತಿದ್ದೀರಾ ಎಂಬುದರ ಬಗ್ಗೆ ಅವರು ಯೋಚಿಸುತ್ತಿದ್ದಾರೆ ಎಂಬುದನ್ನು ಹೊರತರಬಲ್ಲದು ಎಂಬ ಅರಿವನ್ನು ನೀವು ಹೊಂದಿರಬೇಕಾದ ಅಗತ್ಯತೆಯಿದೆ.

ಈಗಾಗಲೇ ಕೆಲವು ಪಠ್ಯಕ್ರಮದ ಭಾಗಗಳಲ್ಲಿ ಅತ್ಯುತ್ತಮವಾದ ಅಭ್ಯಾಸಗಳು ಈಗಾಗಲೇ ಇರುವುದನ್ನು ಅನ್ವೇಷಿಸಬಹುದು, ಇವುಗಳನ್ನು ನೀವು ಉತ್ತಮ ಅಭ್ಯಾಸಗಳಿಗೆ ಉದಾಹರಣೆಯಾಗಿ ಬಳಸಿಕೊಳ್ಳಬಹುದು. ನೀವು ಈ ಚಟುವಟಿಕೆಯನ್ನು ಮೌಲ್ಯಮಾಪನದ ಮೂಲಕ ಕಲಿಕಾ ಸಾಧ್ಯತೆಗಳನ್ನು ಕೇಂದ್ರೀಕರಿಸುವಂತಹ ನಿಮ್ಮ ಸಿಬ್ಬಂದಿಗಳ ಸಭೆಗಳಲ್ಲಿ ಬಳಸಿಕೊಳ್ಳಬಹುದು ಮತ್ತು ನೀವು ಅನ್ವೇಷಿಸಿರುವ ರಚನಾತ್ಮಕ ಮೌಲ್ಯಮಾಪನದ ಸಮರ್ಪಕ ಬಳಕೆಯ ಮೇಲೆ ಬೆಳಕನ್ನು ಚೆಲ್ಲಬಹುದು. ಇದನ್ನು ನೀವು ನಿಮ್ಮ ಶಾಲೆಯ ಪರಿವೀಕ್ಷಣೆಯ ಸಂದರ್ಭದಲ್ಲಿ ಉತ್ತಮ ಅಭ್ಯಾಸಗಳನ್ನು ಗುರುತಿಸಲು ಸಹಾಯಕವಾಗಲು ಹಾಗೂ ಹೆಚ್ಚು ಬೆಂಬಲ ಅಗತ್ಯವಿರುವ ಸಿಬ್ಬಂದಿಗೆ ಹೆಚ್ಚಿನ ಸಹಾಯ ನೀಡುವಲ್ಲಿ ಮೌಲ್ಯಮಾಪನವನ್ನು ಕೇಂದ್ರೀಕರಿಸಲು ನಿರ್ಧರಿಸಬಹುದು.

ಸಣ್ಣ ಗುಂಪಿನಲ್ಲಿ ಶಿಕ್ಷಕರೊಂದಿಗೆ ಕಾರ್ಯ ನಿರ್ವಹಿಸಿ, ಅವರು ನಿರಂತರ ರಚನಾತ್ಮಕ ಮೌಲ್ಯಮಾಪನದ ಅವಕಾಶಗಳನ್ನು ಸೃಷ್ಟಿಸುವಲ್ಲಿ ನೀವು ನೆರವನ್ನು ನೀಡಬಹುದು.

## ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಿ

ಸಿಬ್ಬಂದಿಗಳ ದೃಷ್ಟಿಕೋನ ಹಾಗೂ ಮೌಲ್ಯಮಾಪನದ ಬಗ್ಗೆ ಸಿಬ್ಬಂದಿಗಳು ಹೊಂದಿರುವ ದೃಷ್ಟಿಕೋನ ಬಹಳ ಮುಖ್ಯವಾಗಿರುವುದಾಗಿದೆ.ಆದರೂ ಅವು ಕೇವಲ ಪ್ರಕ್ರಿಯೆಯ ಭಾಗವಾಗಿದೆ. ರಚನಾತ್ಮಕ ಮೌಲ್ಯಮಾಪನದ ಯಶಸ್ವೀ ಅನುಷ್ಠಾನವು ಈ ಎರಡು ಪ್ರಶ್ನೆಗಳನ್ನು ಒಳಗೊಂಡಿದೆ-

1. ಮೌಲ್ಯಮಾಪನಾ ಅವಕಾಶಗಳಿಂದ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಕಲಿಯಲು ಸಹಕಾರಿಯಾಗುವಂತಹ ಅಗತ್ಯ ಮಾಹಿತಿಯು ಶಿಕ್ಷಕರಿಗೆ ಸಿಗುತ್ತಿದೆಯೇ?
2. ವಿದ್ಯಾರ್ಥಿಗಳು ಕಲಿಕೆಯನ್ನು ಪರಿಣಾಮಕಾರಿಯಾಗಿಸಲು ಹಾಗೂ ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಅಗತ್ಯವಿರುವ ಹಿಮ್ಮಾಹಿತಿಯನ್ನು ಪಡೆಯುತ್ತಿದ್ದಾರೆಯೇ?

ಸಮಯವನ್ನು ಬದಿಗಿಟ್ಟು, ವಿದ್ಯಾರ್ಥಿಗಳಿಗೆ ರಚನಾತ್ಮಕ ಮೌಲ್ಯಮಾಪನದ ಬಗ್ಗೆ ಅವರ ಅನುಭವ ಮತ್ತು ಮೌಲ್ಯಮಾಪನ ಮತ್ತು ಹಿಮ್ಮಾಹಿತಿಯನ್ನು ಉತ್ತಮಪಡಿಸಲು ಯಾವುದಾದೂ ಸಲಹೆಗಳಿವೆಯೇ ಎಂದು ಕೇಳುವುದು ಬಹಳ ಅತ್ಯಗತ್ಯವಾದುದು. ಪ್ರತಿಯೊಂದು ಮೌಲ್ಯಮಾಪನಾ ಅವಕಾಶದಲ್ಲಿಯೂ ವಿದ್ಯಾರ್ಥಿಗಳನ್ನು ಒಳಗೊಳ್ಳುವುದು ಒಂದು ಭಾಗವಾಗಬೇಕು, ಇದರಿಂದ ಶಿಕ್ಷಕರಿಗೆ ವಿದ್ಯಾರ್ಥಿಗಳು ಮೌಲ್ಯಮಾಪನದಿಂದ ಏನನ್ನು ಕಲಿತರು ಎಂಬುದು ತಿಳಿಯುವುದರೊಂದಿಗೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರೂ ಸೇರಿ ಮುಂದಿನ ಕಲಿಕೆಯ ಹಂತಗಳನ್ನು ಗುರುತಿಸಬಹುದು. ಈ ರೀತಿ ಮೌಲ್ಯಮಾಪನವು ವೈಯಕ್ತಿವಾಗುವುದು, ಇದನ್ನು ವಿಭಿನ್ನೀಕರಿಸಿದ ಮೌಲ್ಯಮಾಪನ ಎಂದೂ ಸಹ ಕರೆಯುವರು.ನಿಮ್ಮ ತಂಡದೊಂದಿಗೆ ಈ ಬಗ್ಗೆ ತಿಳಿಸಲು/ ಚರ್ಚಿಸಲು ಸಂಪನ್ಮೂಲ-2- ಮೇಲ್ವಿಚಾರಣೆ ಮತ್ತು ಹಿಮ್ಮಾಹಿತಿ ನೀಡುವಿಕೆ ಉಪಯುಕ್ತವಾಗಬಹುದು.

# 4. ಕಲಿಕಾ ಗುರಿಗಳನ್ನು ಸ್ಥಾಪಿಸುವುದು / ರಚಿಸುವುದು

ಶಿಕ್ಷಕರು ವಿದ್ಯಾರ್ಥಿಗಳು ಕಲಿಕೆಯಲ್ಲಿ ಎತ್ತ ಸಾಗುತ್ತಿದ್ದಾರೆ ಎಂಬುದನ್ನು ತಿಳಿದಿದ್ದಾಗ ಮಾತ್ರ ರಚನಾತ್ಮಕ ಮೌಲ್ಯಮಾಪನವು ಪರಿಣಾಮಕಾರಿಯಾಗಿರುವುದು. ಪ್ರತೀ ಶಿಕ್ಷಕರು ಪ್ರತೀ ಶೈಕ್ಷಣಿಕ ವರ್ಷದ ಅಂತ್ಯಕ್ಕೆ, ಪಾಠಗಳ ಸರಣಿಯ ಅಂತ್ಯದಲ್ಲಿ ಹಾಗೂ ಪ್ರತೀ ಚಟುವಟಿಕೆಯ ಪೂರ್ಣಗೊಳಿಸುವಿಕೆಯಲ್ಲಿ ಗುರಿಯನ್ನು ಹೊಂದಿರುವಂತೆ ನೋಡಿಕೊಳ್ಳಬೇಕಾದುದು ನಿಮ್ಮ ಕರ್ತವ್ಯವಾಗಿದೆ.

ಶಿಕ್ಷಕರು ತಮ್ಮ ರಚನಾತ್ಮಕ ಮೌಲ್ಯಮಾಪನವನ್ನು ಅಭಿವೃದ್ಧಿಪಡಿಸಿ, ಬಳಸಲು ಸಹಾಯಕವಾಗುವಂತೆ ವಿದ್ಯಾರ್ಥಿಗಳಲ್ಲಿ ಅಲ್ಪ, ಮಧ್ಯಮ ಮತ್ತು ಧೀರ್ಘ ಕಾಲಿಕ ಗುರಿಗಳ ಬಗ್ಗೆ ಸ್ಪಷ್ಟತೆಯನ್ನು ಮೂಡಿಸುವುದು ಮುಖ್ಯವಾಗಿದೆ. ಚಟುವಟಿಕೆ-3 ಒಂದು ಮಾನಕಯನ್ನು ಬಳಸಿ, ಈ ರೀತಿ ಮಾಡಲು ನೀವು ಶಿಕ್ಷಕರಿಗೆ ಹೇಗೆ ಬೆಂಬಲವನ್ನು ನೀಡಬಹುದು ಎಂಬುದನ್ನು ಯೋಚಿಸಲು ನಿಮಗೆ ಸಹಕಾರಿಯಾಗಿದೆ.ಸಂಪನ್ಮೂಲ-3 ಸಿದ್ಧಿಯ ಅಥವಾ ಸಾಧನೆಯ ವಿವಿಧ ಹಂತಗಳನ್ನು ಮೌಲ್ಯಮಾಪನ ಮಾಡಲು ಮಾನಕಯನ್ನು (rubric) ಬರೆಯಲು ನಿಮಗೆ ಮಾರ್ಗಸರ್ಶನವನ್ನು ನೀಡುವುದು.ಕೋಷ್ಟಕ 1 ಮತ್ತು 2 ರಲ್ಲಿ ವಿವಿದ ಮಾನದಂಡದನ್ವಯ ಮತ್ತು ವಿಭಿನ್ನ ಹಂತಗಳಲ್ಲಿ ಮೌಲ್ಯಮಾಪನ ಮಾಡುವ ಎರಡು ವಿಭಿನ್ನ ಮಾನಕಗಳ (rubric) ಉದಾಹರಣೆಯನ್ನು ನೀಡಲಾಗಿದೆ.

***Table 1****ಮಾಧ್ಯಮಿಕ ಮತ್ತು ಪ್ರೌಢಶಾಲಾ ತಾರ್ಕಿಕ ಆಲೋಚನೆಯ ಮಾನಕಗಳು*

*Middle and high school critical-thinking rubric. (Source: Intellectual Takeout, undated)*

| ಪ್ರದರ್ಶನದ / ಕಾರ್ಯಕ್ಷಮತೆಯ ಹಂತಗಳು | ಆಲೋಚನೆ: ಅರ್ಥವಿವರಣೆ /ವ್ಯಾಖ್ಯಾನವನ್ನು ಹುಟ್ಟುಹಾಕುವುದು. | ಸಾಕ್ಷಾಧಾರಗಳು: ಪಠ್ಯಪುಸ್ತಕದ ಬೆಂಬಲದೊಂದಿಗೆ. | ಪ್ರತಿಕ್ರಿಯೆ: ಇತರ ವಿದ್ಯಾರ್ಥಿಗಳಿಂದ ಮತ್ತು ಅವರಿಂದ ಕಲಿಯುವುದು. |
|---|---|---|---|
| 7<br>ವಿವರಣೆ /ವ್ಯಾಖ್ಯಾನವನ್ನು ವಿಸ್ತರಿಸುವರು. | ಪಠ್ಯವನ್ನು ಪೂರ್ಣವಾಗಿ ವ್ಯಾಖ್ಯಾನಿಸುವ ಆಲೋಚನೆಯನ್ನು ಮುಂದಿಡುವರು.<br>• ತತ್ವಗಳು, ವಿಚಾರಗಳು /ಸಮಸ್ಯೆಗಳು, ಲೇಖಕನ ದೃಷ್ಟಿಕೋನವನ್ನು ಗುರುತಿಸುವರು.<br>• ಪ್ರಶ್ನೆಗಳ ಚೌಕಟ್ಟಿನಿಂದಾಚೆಗೆ ಹೋಗುವರು, ಒಂದು | ಪಠ್ಯಪುಸ್ತಕದ ಸಾಕ್ಷಾಧಾರಗಳನ್ನೆಲ್ಲಾ ಒಟ್ಟುಗೂಡಿಸುವರು.<br>• ಪ್ರಮುಖ ಘಟನೆಗಳು ಮತ್ತು ಸೂಕ್ಷ್ಮವಾದ ವಿವರ ಎರಡನ್ನೂ ಬಳಸುವರು.<br>• ಸಾಕ್ಷಾಧಾರಗಳನ್ನು ತುಲನೆ ಮಾಡುವರು ಮತ್ತು ವಿವೇಚಿಸುವರು. | ಇತರ ವಿದ್ಯಾರ್ಥಿಗಳ ಆಲೋಚನೆ/ಉಪಾಯಗಳಿಗಾಗಿ ನೋಡುವರು.<br>• ಇತರ ವಿದ್ಯಾರ್ಥಿಗಳ ಆಲೋಚನೆ ಸ್ಪಷ್ಟತೆಗಾಗಿ ಪ್ರಶ್ನೆಕೇಳುತ್ತಾರೆ ಹಾಗೂ |
| 6<br>ವ್ಯಾಖ್ಯಾನ /ವಿವರಣೆಯನ್ನು ನಿರ್ಮಿಸುವರು/ ಹುಟ್ಟುಹಾಕುವರು. | ತಮ್ಮ ಸ್ವಂತ ಆಲೋಚನೆಗಳನ್ನು ವಿಸ್ತರಿಸುವರು.<br>• ಷರತ್ತು /ನಿಯಮಗಳನ್ನು ವ್ಯಾಖ್ಯಾನಿಸುವರು ಹಾಗೂ ಸೂಚ್ಯಾರ್ಥಗಳನ್ನು ಶೋಧಿಸುವರು. | ಹತ್ತಾರು ವಿವಿಧ (passage)ಗದ್ಯಬಾಗ ಗಳಿಂದ ಪ್ರಕರಣವನ್ನು ಹುಟ್ಟುಹಾಕುವರು.<br>• ಆಲೋಚನೆಯ ಪ್ರಕ್ರಿಯೆಯ ಮೂಲಾನೇಶ್ವಣೆ ಮಾಡುವರು. | ಇತರ ವಿದ್ಯಾರ್ಥಿಗಳ ಆಲೋಚನೆ ಮತ್ತು ಸಾಕ್ಷಿಗಳನ್ನು ಸೇರಿಸಿಕೊಳ್ಳುವರು.<br>• ನಿರ್ದಿಷ್ಟ ಭಾಗಗಳಿಗೆ ಸಮ್ಮತಿಸಬಹುದು ಅಥವಾ |
| 5<br>ಉತ್ತರವನ್ನು ವಿವರಿಸುವರು. | ಹೇಗೆ ಒಂದು ಆಲೋಚನೆಯು ಪ್ರಶ್ನೆಗೆ ಉತ್ತರಿಸುವುದು ಎಂಬುದನ್ನು ವಿವರಿಸುವುದು.<br>• ಕ್ರಿಯೆ ಮತ್ತು ಲಕ್ಷಣಗಳನ್ನು ಪರಸ್ಪರ ಸಂಬಂಧೀಕರಿಸುವರು<br>• ಸ್ಪಷ್ಟತೆಯನ್ನು ನೀಡಲು ತಮ್ಮ ಕಲ್ಪನೆ/ಊಹೆಗಳನ್ನು | ಹೇಗೆ ಒಂದು ಗದ್ಯಭಾಗ (passage) ಆಲೋಚನೆಯನ್ನು ಬೆಂಬಲಿಸುವುದು ಎಂಬುದನ್ನು ವಿವರಿಸುವರು.<br>• ಸಮರ್ಪಕ ಪದಗಳಿಗೆ ಮತ್ತು ಮಾತಿಗೆ ಅರ್ಥ ಮತ್ತು ಅಧಿಕಾರ್ಥಗಳನ್ನು ಶೋಧಿಸುವರು.<br>• ಯಾವಾಗ ಸಾಕ್ಷಾಧಾರಗಳು ತಮ್ಮ ಆಲೋಚನೆಗೆ | ಸಮ್ಮತಿಗೆ ಮತ್ತು ಅಸಮ್ಮತಿಗೆ ಕಾರಣ ಮತ್ತು ವವರಣೆಯನ್ನು ನೀಡುವರು.<br>• ಇತರ ವಿದ್ಯಾರ್ಥಿಗಳ ಆಲೋಚನೆಗಳನ್ನು ಟೀಕಿಸುವರು ಅಥವಾ ಬೆಂಬಲಿಸುವರು. |
| 4<br>ವಿಚಾರ /ಸಮಸ್ಯೆಯನ್ನು | ವಿವರಿಸಿದಂತಹ ವಿಚಾರ/ ಸಮಸ್ಯೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವರು.<br>• ಉದ್ದೇಶಗಳನ್ನುಮತ್ತು ಕಾರಣಗಳನ್ನು, ನಿರ್ಣಯಿಸುವರು/ | ಸಾಕ್ಷಾಧಾರಗಳ ಅಗತ್ಯತೆಯನ್ನು ಅರ್ಥಮಾಡಿಕೊಳ್ಳುವರು.<br>• ಸ್ವಪ್ರೇರಿತರಾಗಿ ಪಠ್ಯಗಳನ್ನು ಹಿಂದುರಿಗಿ ನೋಡುವರು. | ಇತರ ವಿದ್ಯಾರ್ಥಿಗಳ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವರು ಮತ್ತು ಸಾರಾಂಶೀಕರಿಸುವರು. |
| 3<br>ಪರ್ಯಾಯ ಅಂಶಗಳನ್ನು ಗುರುತಿಸುವರು. | ಪರಿಗಣಿಸಿದ ಉತ್ತರವನ್ನು ಪ್ರತಿಪಾದಿಸುವರು, ಪರ್ಯಾಯ ಆಲೋಚನೆಯ ಬಗ್ಗೆ ತಿಳಿದಿರುವರು.<br>• ಉತ್ತರಗಳ ಮಧ್ಯದಲ್ಲಿ ಹಿಂಜರಿಯಬಹುದು. | ಪರ್ಯಾಯ ಉತ್ತರಗಳಿಗೆ ವಿರುದ್ಧವಾದ ಉತ್ತರಗಳಿಗೆ ಬೆಂಬಲಿಸುವರು.<br>• ಸಮರ್ಪಕವಾದ ಮುಖ್ಯ ಗದ್ಯಬಾಗವನ್ನು | ಪರ್ಯಾಯ ಉತ್ತರಗಳನ್ನು ಗುರುತಿಸುವರು ಮತ್ತು ಸಮ್ಮತಿ ಅಥವಾ ಅಸಮ್ಮತಿಸಬಲ್ಲರು. |
| 2<br>ಉತ್ತರವನ್ನು ಸರಳ ಮತ್ತು ವೇಗವಾಗಿ ನೀಡುವರು. | ಪ್ರಶ್ನೆಗಳಿಗೆ ವೇಗವಾಗಿ ಮತ್ತು ಸರಳವಾಗಿ ಉತ್ತರಿಸುವರು.<br>• All-or-nothing snap judgment<br>• ಸ್ಪಷ್ಟತೆಗಾಗಿ ಉತ್ತರವನ್ನು ಪುನರುಚ್ಚರಿಸುವರು. | ಸ್ವಪ್ರೇರಿತರಾಗಿ ಬೆಂಬಲ ಸೂಚಿಸುವುದಕ್ಕಿಂತ ಕೇಳಿದಾಗ ಮಾತ್ರ ಬೆಂಬಲ ನೀಡುವರು.<br>• ಮುಖ್ಯವಾದ ಪಠ್ಯದ ಸತ್ಯಾಂಶಗಳನ್ನು ಸ್ಮರಿಸಿಕೊಳ್ಳುವರು. | ಇತರ ವಿದ್ಯಾರ್ಥಿಗಳ ಉತ್ತರಗಳಿಗೆ ಅವರ ಬಗ್ಗೆ ಮಾತನಾಡದೇ ಶೀಘ್ರವಾಗಿ/ವೇಗವಾಗಿ ಪ್ರತಿಕ್ರಿಯೆಯನ್ನು ನೀಡುವರು. |
| 1<br>ಉತ್ತರವನ್ನು ಪ್ರಾರಂಭಿಸುವರು. | ಪ್ರಶ್ನೆಗಳನ್ನು ಉತ್ತರಿಸುವ ಬದಲು ಪಠ್ಯದ ಬಗ್ಗೆ ಮಾತನಾಡುವರು. | ಕಥೆ ಅಥವಾ ಘಟನೆಯನ್ನು ಮತ್ತೊಮ್ಮೆ ಹೇಳಬಹುದು, ಅಥವಾ ಪಠ್ಯದಲ್ಲಿ ನೀಡಿರುವ ಅಂಶದ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸುವರು. | ಇತರರು ಯಾವುದೇ ಅಡೆತಡೆಯಿಲ್ಲದೇ ಮಾತನಾಡಲು ಅನುವು ಮಾಡಿಕೊಡುವರು. |

***ಕೋಷ್ಟಕ-2ಪ್ರಾಥಮಿಕ ಕಲಾ ಅಧ್ಯಾಯಗಳ ಶ್ರೇಣಿಗಳ ಹಂತಗಳು***

*Art rubrics elementary grade level. (Source: Valerie Burger, undated)*

| ವಿಭಾಗ | ಪರಿಣಿತಿ | ಸಮರ್ಥ | ಹೊಸ ವಿದ್ಯಾರ್ಥಿ | ಅಭಿವೃದ್ಧಿ ಯಾಗಬೇಕಾಗಿರುವುದು/ ವಿಕಾಸವಾಗಬೇಕಾಗಿರುವುದು |
|---|---|---|---|---|
| ಕಲೆಗಾರಿಕೆ /ಕಸುಬುದಾರಿಕೆ | ಆಕೃತಿಯು (form) ಜಾಗರೂಕತೆಯಿಂದ ಯೋಜಿಸಲ್ಪಟ್ಟಿದೆ. ಆಕೃತಿಯು ಸಮತೋಲಿತವಾಗಿದೆ, ತುದಿಯು ಮೃದು ಮತ್ತು ನಯವಾಗಿದೆ. ಗೋಡೆಗಳು ಸಮಾನ ಗಾತ್ರದ್ದಾಗಿದೆ / ದಪ್ಪವನ್ನು ಹೊಂದಿದೆ. ಸೇರಿಸಿರುವುದು /ಅಂಟಿಸಿರುವಿಕೆ ಸುರಕ್ಷಿತವಾಗಿವೆ ಮತ್ತು ಕಾಣುತ್ತಿಲ್ಲ /ಅವಿತಿದೆ. ಎಲ್ಲಾ ಮೇಲ್ಮೈ ಮೃದುವಾಗಿದ್ದು, ಒರಟು ಅಥವಾ ಸೊಟ್ಟಗಿಲ್ಲ. | ಆಕೃತಿ / ರಚನೆಯು ತಕ್ಕಮಟ್ಟಿಗೆ ಯೋಜಿತವಾಗಿದೆ, ಸ್ವಲ್ಪ ಅಸಮಾನವಾಗಿದೆ. ಹೆಚ್ಚಿನ ತುದಿಗಳು ಮೃದು ಮತ್ತು ನಯವಾಗಿವೆ. ಕೆಲವೇ ಕೆಲವು ಕಡೆ ಒರಟಾಗಿವೆ. ಸಮಾನ ಗಾತ್ರದ್ದಾಗಿದೆ / ದಪ್ಪವಾಗಿವೆ. ಸೇರಿಸಿರುವುದು /ಅಂಟಿಸಿರುವಿಕೆ ಸುರಕ್ಷಿತವಾಗಿವೆ ಮತ್ತು ಕಾಣುತ್ತಿಲ್ಲ /ಅವಿತಿದೆ. ಹೆಚ್ಚಿನ ಮೇಲ್ಮೈಯು ಒರಟಿಲ್ಲದೇ ಮೃದುವಾಗಿದೆ. | ಆಕೃತಿ /ರಚನೆಯು ಯೋಜಿತವಾಗಿಲ್ಲ ಮತ್ತು ಸಮತೋಲಿತವಾಗಿಲ್ಲ. ಕೆಲವು ತುದಿಗಳು ಮೃದುವಾಗಿವೆ ಆದರೆ ಹೆಚ್ಚಿನವು ನಯವಾಗಿಲ್ಲ. ಸೇರಿಸಿರುವುದು /ಅಂಟಿಸಿರುವುದು ಸುರಕ್ಷಿತವಾಗಿದೆ ಆದರೆ ಕಾಣುತ್ತಿದೆ. ಕೆಲವು ಸೊಟ್ಟತೆಯೊಂದಿಗೆ ಗೋಡೆಯ ಗಾತ್ರ /ದಪ್ಪದಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ.ಕೆಲವು ಕಡೆ ಒರಟಾಗಿದ್ದರೂ ಹೆಚ್ಚಿನ ಮೇಲ್ಮೈಯು ನಯವಾಗಿದೆ, ಆದರೆ ಕೆಲವು ಕಡೆ ಒರಟಾಗಿರುವುದನ್ನು ಸಾಕ್ಷೀಕರಿಸುತ್ತದೆ. | ಆಕೃತಿ /ರಚನೆಯಲ್ಲಿ ಯೋಜನೆ ಮತ್ತು ಪ್ರಯತ್ನದ ಕೊರತೆ ಕಾಣುತ್ತಿದೆ. ಮೇಲ್ಮೈ ಅಸಮಾನವಾದ ಗಾತ್ರ /ದಪ್ಪತೆಯೊಂದಿಗೆ ಕೂಡಿದ್ದು, ಒರಟಾಗಿದೆ. ಸೇರಿಸಿರುವುದು /ಅಂಟಿಸಿರುವುದು ಸುರಕ್ಷಿತವಾಗಿಲ್ಲ. ಮೇಲ್ಮೈ ಮತ್ತು ತುದಿಗಳು ನಯವಾಗಿಲ್ಲ. |
| ಸೃಜನಾತ್ಮಕತೆ | ವಿನ್ಯಾಸವು ಅನನ್ಯವಾಗಿದೆ. ಸಂಪೂರ್ಣವಾಗಿ ಸ್ವಂತಿಕೆಯಿಂದ ಕೂಡಿದ ಅಂಶಗಳು ಕಾಣುತ್ತಿವೆ. ವಿವರವಾದ ಮಾದರಿಗೆ ಅಥವಾ ಅಸಾಧಾರಣವಾದ ಅನ್ವಯನಕ್ಕೆ ಸಾಕ್ಷಿಯಾಗಿದೆ. | ವಿನ್ಯಾಸವು ಅಭಿವ್ಯಕ್ತತೆಯಿಂದ ಕೂಡಿದೆ, ಕೆಲವು ಅನನ್ಯ ಅಂಶಗಳನ್ನು ಒಳಗೊಂಡಿದೆ. Has ‘branched out’ to some degree. | ವಿನ್ಯಾಸದಲ್ಲಿ ವೈಯಕ್ತಿಕತೆಯ ಕೊರತೆಯಿದೆ. ಕೆಲವೇ ಕೆಲವು ವಿವರಗಳಿವೆ ಅಥವಾ ಅಭಿವ್ಯಕ್ತವಾಗಿರುವ ಆಕೃತಿ/ರಚನೆಗೆ ಸಮರ್ಪಕವಾಗುವಷ್ಟಿಲ್ಲ. ನಕಲು ಮಾಡಿದುದಕ್ಕೆ ಸಾಕ್ಷಾಧಾರವಾಗಿವೆ. | ವಿನ್ಯಾಸದಲ್ಲಿ ಹಲವು ಅಂಶಗಳ ಕೊರತೆ ಮತ್ತು ಆಸಕ್ತಿ ಎದ್ದು ಕಾಣುತ್ತಿದೆ. ಕಡಿಮೆ ಹೆಚ್ಚುವರಿ ಲಕ್ಷಣಗಳನ್ನು / ವೈಶಿಷ್ಟ್ಯವನ್ನು ಹೊಂದಿದೆ ಅಥವಾ ಇತರರ ಅಂಶಗಳನ್ನು ನಕಲು ಮಾಡಿರುವುದು ಕಂಡುಬರುತ್ತಿದೆ.ವೈಯಕ್ತಿಕತೆ ಯನ್ನು ಪ್ರದರ್ಶಿಸಲು ಹೆಚ್ಚಿನ ಪ್ರಯತ್ನಗಳನ್ನು ಹಾಕಿರುವುದಿಲ್ಲ |
| ಉತ್ಪಾದಕತೆ /ಪ್ರಯತ್ನ | ತರಗತಿಯ ಗರಿಷ್ಟ ಸಮಯವನ್ನು ಬಳಸಿಕೊಳ್ಳುವರು. | ತರಗತಿ ಸಮಯವನ್ನು ಕೆಲಸಕ್ಕಾಗಿ ಬಳಸಿಕೊಂಡರೂ ಕೆಲವು | ಹೆಚ್ಚಿನ ಸಮಯದಲ್ಲಿ ಯೋಜನೆಯ ಮೇಲೆ ಗಮನ ಕೇಂದ್ರೀಕರಿಸಲು | ಯಾವಾಗಲಾದರೊಮ್ಮೆ ಮಾತ್ರ ಕೆಲಸದ ಗುಣಮಟ್ಟದ ಬಗ್ಗೆ ಯೋಚಿಸುತ್ತಾರೆ. |

| | | | | |
|---|---|---|---|---|
| | ಯಾವಾಗಲೂ ಕಾರ್ಯನಿರತರಾಗಿರುವರು. ಮಾದರಿಯನ್ನು ತಯಾರಿಸುವಲ್ಲಿ ಸಮಯ ಮತ್ತು ಪ್ರಯತ್ನವನ್ನು ಹಾಕುವುದನ್ನು ಪ್ರತ್ಯಕ್ಷವಾಗಿ ಕಾಣಬಹುದು. | ಸಮಯದಲ್ಲಿ ಇತರರಿಂದ ತಮ್ಮ ಗಮನವನ್ನು ಬೇರೆಡೆ ನೀಡುವರು. ಕೆಲಸಕ್ಕೆ ಶ್ರೇಷ್ಠತೆ /ಪರಿಣಿತಿ ಸಾಕಾಗುತ್ತಿಲ್ಲ. | ಕಷ್ಟಪಡುವರು. ಇತರರಿಂದ ಸುಲಭವಾಗಿ ಚಂಚಲತೆಗೊಳಗಾಗುತ್ತಾರೆ. | ಪೂರ್ಣಗೊಳಿಸಲು ಹೆಚ್ಚಿನ ಪ್ರಯತ್ನ ಹಾಕುವುದು ಕಂಡುಬರುವುದಿಲ್ಲ. |
| ಕಾರ್ಯದ ಅಭ್ಯಾಸಗಳು / ಮನೋಭಾವ | ಗೌರವಯುತವಾಗಿದೆ, ಧನಾತ್ಮಕ ಸಲಹೆಗಳಿಗೆ ಮುಕ್ತವಾಗಿದ್ದಾರೆ, ಕೆಲಸದ ಜಾಗವನ್ನು ನೀಟಾಗಿ ಸ್ವಚ್ಛಗೊಳಿಸುವರು. | ಗೌರವಯುತವಾಗಿದ್ದಾರೆ, ಸಲಹೆಗಳನ್ನು ಒಪ್ಪಿಕೊಳ್ಳುತ್ತಾರೆ, ಹೆಚ್ಚಿನ ಸಮಯದಲ್ಲಿ ಕೆಲಸದ ಜಾಗವನ್ನು ಸ್ವಚ್ಛ ಮಾಡಿಕೊಳ್ಳುತ್ತಾರೆ. | ಸುಧಾರಣೆಗಾಗಿ ನೀಡುವ ಸಲಹೆಗಳನ್ನು ಮುಕ್ತವಾಗಿ ಒಪ್ಪಿಕೊಳ್ಳುವ ಕೊರತೆಯಿದೆ. ಸ್ವಚ್ಛತೆಯ ಕಾರ್ಯದಲ್ಲಿ ತೊಡಗುವುದಕ್ಕೆ ಕಷ್ಟಪಡುವರು. Has difficulty being on task to cleaning up. | ಸ್ವಚ್ಛತೆಯನ್ನು ಇತರರಿಗೆ ಬಿಟ್ಟುಬಿಡುವರು, "ಅಹಂಭಾವ" ವನ್ನು ಹೊಂದಿರುವರು ಹಾಗೂ ಸಲಹೆಯ ನೆರವನ್ನು ಮುಕ್ತವಾಗಿ ಒಪ್ಪುಕೊಳ್ಳುವುದಿಲ್ಲ. |

## ಚಟುವಟಿಕೆ 3: ಶಿಕ್ಷಕರಿಗೆ ಕಲಿಕಾ ಗುರಿಗಳನ್ನು ಸ್ಥಾಪಿಸಲು/ರಚಿಸಲು ಬೆಂಬಲವನ್ನು ನೀಡುವುದು.

ಈ ಕೆಳಗೆ ನೀಡಿರುವ ಸಂಭಾಷಣೆಯಲ್ಲಿ. ಒಬ್ಬ ಶಾಲಾನಾಯಕರು ತಮ್ಮ ಶಿಕ್ಷಕರೊಂದಿಗೆ, ಬರವಣಿಗೆ ಕೌಶಲ್ಯವನ್ನು ಮೌಲ್ಯಮಾಪನ ಮಾಡಲು ಮಾನಕ (Rubric) ಯನ್ನು ರಚಿಸಲು ಬೆಂಬಲ ನೀಡುತ್ತಿದ್ದಾರೆ, ಇದನ್ನು ಅಭಿನಯದ ರೂಪದಲ್ಲಿ ಹೇಳಲಾಗಿದೆ.  ಇದನ್ನು ಓದುವ ಸಂಧರ್ಭದಲ್ಲಿ ಹೇಗೆ ಶಾಲಾ ನಾಯಕರು ತಾವು ಏನನ್ನೂ ಹೇಳದೇ, ಶಿಕ್ಷಕರೇ ಯೋಚನೆ ಮಾಡುವ ಹಾಗೆ ಹೇಗೆ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ ನಿಮ್ಮ ಕಲಿಕಾ ಡೈರಿಯಲ್ಲಿ ಬರೆದುಕೊಳ್ಳಿ.

**ಶಿಕ್ಷಕರು** ನಾನು ಈಗಾಗಲೇ ವಿದ್ಯಾರ್ಥಿಗಳಿಗೆ ಕಥೆಯನ್ನು ಸನ್ನಿವೇಶ, ನಟರು, ಪಾತ್ರಗಳಿಂದ ಪ್ರಾರಂಭಗೊಂಡು ನಾಟಕಕ್ಕೆ ರೂಪಾಂತರ ಮಾಡಲು ಹೇಳಿದ್ದೇನೆ. ರಂಗ ನಿರ್ದೇಶನ / ರಂಗ ಸೂಚನೆಗೆ ಸಂಬಂಧಿಸಿದಂತೆ ಅವರು ಬಳಸಿಕೊಳ್ಳಬಹುದಾದ ಒಂದು ಚಾರ್ಟ್ ಮಾಡುತ್ತಿದ್ದೇನೆ ಹಾಗೂ ಇದನ್ನು ಕರಿಹಲಗೆ /ಬೋರ್ಡ್ನ ಮೇಲೆ ಹಾಕುತ್ತಿದ್ದೇನೆ. ನಾನು ಅವರಿಗೆ ಕೊಟ್ಟ ಕೆಲಸಕ್ಕೆrubric ಸಂಯೋಜಿಸುವುದು ಹೇಗೆ ಎಂಬುದು ತಿಳಿಯುತ್ತಿಲ್ಲ.

**ಶಾಲಾ ನಾಯಕರು** ಅದು ಸರಿ, ಪ್ರಾರಂಭಿಸಲು ಒಂದು ಒಳ್ಳೆಯ ಜಾಗವನ್ನು ಗುರುತಿಸುವ, ನಾಟಕವನ್ನು ಬರೆಯುವ ಮೂಲಕ ಏನನ್ನು ಪ್ರಾತ್ಯಕ್ಷೀಕರಿಸಬೇಕೆಂದು ನೀವು ಬಯಸುವಿರಿ. ಉದಾಹರಣೆಗೆ ನೀವು ಚಾರ್ಟ್ ನಲ್ಲಿ ಬರೆದಿರುವ ಎಲ್ಲಾ ರಂಗ-ನಿರ್ದೇಶನ/ ಸೂಚನೆಗಳನ್ನು ಅವರು ಬಳಸಬೇಕೆಂದು ಇಚ್ಛಿಸುತ್ತಿದ್ದೀರಾ?

**ಶಿಕ್ಷಕರು** ಅವರು ಅದನ್ನು ಮಾಡಬಲ್ಲರೆಂದು ನಿಮಗನಿಸುತ್ತದೆಯೇ?

**ಶಾಲಾ ನಾಯಕರು** ಹಾ, ಅದು ಚಾರ್ಟ್ ನಲ್ಲಿ ನೀವೆಷ್ಟು ಬರೆಯುತ್ತೀರಾ ಮತ್ತು ಸಾಮಾನ್ಯವಾಗಿ ಅವುಗಳನ್ನುನಾಟಕ ರಚನೆಯಲ್ಲಿ ಎಷ್ಟು ಬಾರಿ ಬಳಸುತ್ತಾರೆ ಎಂಬುದನ್ನು ಅವಲಂಬಿಸಿದೆ.

**ಶಿಕ್ಷಕರು** ಹೆಚ್ಚಿನವುಗಳನ್ನು ಆಗಾಗ್ಗೆ ಬಳಸುತ್ತಾರೆ. ನನ್ನ ಬಳಿಯಿರುವ ಪ್ರದರ್ಶನ ಫಲಕದಲ್ಲಿ ಎಂಟು ರಂಗ ಸೂಚನೆಗಳಿವೆ. ಬಹಳ ಸುಲಭವಾದವುಗಳೆಂದರೆ, 'ನಿರ್ಗಮನ' ಹಾಗೂ 'ಆಗಮನ' ಮತ್ತೆ ಬಹಳ ಕಠಿಣವಾದವುಗಳೆಂದರೆ 'ರಂಗಭೂಮಿಯಿಂದಾಚೆ', 'ರಂಗದ ಮುಂಭಾಗ ಚಲಿಸಿ', ರಂಗದ ಮಧ್ಯದಿಂದ ಮಾತನಾಡಿ'....... …

| | |
|---|---|
| **ಶಾಲಾ ನಾಯಕರು** | ಹಾಗಿದ್ದರೆ, ವಿದ್ಯಾರ್ಥಿ, ಇದನ್ನು ತನ್ನ ನಾಟಕ ರಚನೆಯಲ್ಲಿ ಬಳಸಬೇಕಾದರೆ, ಇದನ್ನು ಏಕೆ ಬಳಸಲಾಗುತ್ತದೆ ಮತ್ತು ಅವುಗಳನ್ನು ಬಳಸಲು ತನ್ನದೇ ಆದ ಕಾರಣಗಳಿವೆ ಎಂಬುದನ್ನು ಅರಿತಿರಬೇಕು. |
| **ಶಿಕ್ಷಕರು** | ಹೌದು, ಮುಂದೆ ಪ್ರದರ್ಶನ ಮಾಡುವಾಗ ಸಹಾಯವಾಗಲು ರಂಗಕಲೆಯನ್ನು ವಿದ್ಯಾರ್ಥಿಗಳು ಕಲಿಯಬೇಕೆಂದು ಈ ಬಗ್ಗೆ ಅವರೊಂದಿಗೆ, ಅವರು ತರಗತಿಯಲ್ಲಿ ಪ್ರಹಸನವೊಂದನ್ನು ಮಾಡಿದಾಗ ಚರ್ಚಿಸಿದ್ದೆ, ನನಗನ್ನಿಸುತ್ತೆ ಇದರಿಂದ ನಮ್ಮ ವಾರ್ಷಿಕೋತ್ಸವದಲ್ಲಿ ಸಹಾಯವಾಗುತ್ತೆ. |
| **ಶಾಲಾ ನಾಯಕರು** | ಏಕೆ ಗುಂಪಿನಲ್ಲಿ ನಿಮ್ಮ ತರಗತಿಯ ಮಕ್ಕಳು ಚೆನ್ನಾಗಿ ತಮ್ಮನ್ನು ತಾವು ಪ್ರಸ್ತುತಪಡಿಸುತ್ತಾರೆ ಎಂಬುದು ಈಗ ನನಗೆ ತಿಳಿಯಿತು, ಎಲ್ಲಾ ಎಂಟು ರಂಗಸೂಚನೆಗಳನ್ನು ಸಮರ್ಪಕವಾಗಿ ಬಳಸುವ ವಿದ್ಯಾರ್ಥಿಗೆ ನೀವು ಅತ್ಯುನ್ನತ (outstanding) ಶ್ರೇಣಿಯನ್ನು ನೀಡುವಿರೇನೋ ಎಂದು ಆಶ್ಚರ್ಯವಾಗುತ್ತಿದೆ. |
| **ಶಿಕ್ಷಕರು** | ಹುಂ, ತೋರಿಸಿರುವುದಕ್ಕಿಂತ ಹೆಚ್ಚಿನ ರಂಗಸೂಚನೆಗಳನ್ನು ಬಳಸಿದಲ್ಲಿ ಅತ್ಯುನ್ನತ ಎನ್ನಬಹುದು.ನಿಮ್ಮ ಮಾತಿನ ಅರ್ಥ ನನಗೆ ತಿಳಿಯಿತು. ಕೇವಲ ಯಾವುದಾದರೂ ಎರಡು ರಂಗಸೂಚನೆಗಳನ್ನು ಬಳಸಿದರೆ, ಆ ವಿದ್ಯಾರ್ಥಿಗೆ ಗಮನ ಹರಿಸುವ ಅಗತ್ಯವಿದೆ. ನೀಡಿರುವ ಎಲ್ಲಾ ಎಂಟು ರಂಗಸೂಚನೆಗಳನ್ನು ಬಳಸಿದಲ್ಲಿ ಎ ಶ್ರೇಣಿ ಎಂದು ಹೇಳಬಹುದು. ಆರನ್ನು ಬಳಸಿದರೆ ಸರಾಸರಿ ಎನ್ನಬಹುದು ಹಾಗೆಯೇ ಯಾರ ಕಥೆ/ನಾಟಕದಲ್ಲಿ ನಾಲ್ಕು ರಂಗಸೂಚನೆಗಳು ಒಳಗೊಂಡಿದೆಯೋ ಅವರಿಗೆ ತೃಪ್ತಿಕರ ಸಿ ಶ್ರೇಣಿಯನ್ನು ನೀಡಬಹುದು. |
| **ಶಾಲಾ ನಾಯಕರು** | ಇಲ್ಲಿ ಸಮರ್ಪಕತೆಯನ್ನು ಮರೆಯುವುದು ಬೇಡ. ಅತ್ಯುನ್ನತ ಶ್ರೇಣಿಯನ್ನು ನೀಡಬೇಕಾದರೆ, ರಂಗಸೂಚನೆಗಳನ್ನು ಸಮರ್ಪಕತೆಯೊಂದಿಗೆ ಬಳಸಿರಬೇಕು. |
| **ಶಿಕ್ಷಕರು** | ಸರಿ, ಹಾಗಿದ್ದಲ್ಲಿ ಈ ಬಗ್ಗೆ ಮತ್ತಷ್ಟು ಕೆಲಸ ಮಾಡಿ ನಿಮ್ಮನ್ನು ಕಾಣುವೆ. ನನ್ನ ಮನಸ್ಸಿನಲ್ಲಿ ಇನ್ನೂ ಕೆಲವು ಮಾನದಂಡಗಳಿವೆ. |

**ಚರ್ಚೆ:-**

ನೀವು ಗಮನಿಸಿರಬಹುದು, ಶಾಲಾ ನಾಯಕರ ಪ್ರಶ್ನೆಗಳು ಶಿಕ್ಷಕರಿಗೆ ಮೌಲ್ಯಮಾಪನದ ಬಗ್ಗೆ ಶಿಕ್ಷಕರು ಯೋಚಿಸಲು ಸಹಾಯ ಮಾಡುತ್ತಿದ್ದವು. ಶಿಕ್ಷಕಿ ಬಹಳ ಸ್ಪಷ್ಟತೆಯೊಂದಿಗೆ ಮತ್ತು ಹೆಚ್ಚು ಮಾನದಂಡಗಳೊಂದಿಗೆ ಮೌಲ್ಯಮಾಪನದ ಮಾನಕ (rubric) ವನ್ನು ರಚಿಸುವ ಇಚ್ಛೆಯೊಂದಿಗೆ ಅಲ್ಲಿಂದ ಹೊರಟರು.

ಇದನ್ನು ವಿಮರ್ಶಾತ್ಮಕವಾಗಿ ನೋಡುವುದಾದರೆ, ಶಿಕ್ಷಕರು ಅರ್ಥಮಾಡಿಕೊಳ್ಳಬೇಕಾದ ಅಂಶವೆಂದರೆ, ಅವರು ಮೊದಲಿಗೆ ಉಪಯೋಗಿಸಲು ಯೋಚಿಸಿದ್ದಂತಹ ಮಾನದಂಡಗಳು(ರಂಗಸೂಚನೆಯನ್ನು ಬಳಸಿದ ಸಂಖ್ಯೆ) ರಚನಾತ್ಮಕ ಮೌಲ್ಯಮಾಪನವಲ್ಲ. ಶಿಕ್ಷಕಿ ಮೊದಲಿಗೆ ಯೋಚಿಸಿದಂತಹ ಮಾನದಂಡವನ್ನು(ಬಳಸಿದ ರಂಗಸೂಚನೆಗಳ ಸಂಖ್ಯೆ=ಶ್ರೇಣಿ) ಬಳಕೆ ಮಾಡಿದ್ದರೆ, ಹೆಚ್ಚು ರಂಗಸೂಚನೆಗಳನ್ನು ಬಳಸುವಂತೆ ಹೇಳುವುಷ್ಟು ಮಾತ್ರ ಸಾಧ್ಯವಾಗುತ್ತಿತ್ತು, ವಿದ್ಯಾರ್ಥಿಗಳಿಗೆ ಅವರ ಕಲಿಕೆ ಉತ್ತಮಗೊಳಿಸುವಂತಹ ಪರಿಣಾಮಕಾರಿಯಾದ ಹಿಮ್ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತಿರಲಿಲ್ಲವೇನೋ.

ನೀಡಿರುವ ಚಟುವಟಿಕೆಯ ಇತರ ಅಂಶಗಳ ಬಗ್ಗೆಯೂ ಮಾನದಂಡಗಳನ್ನು ಸೇರಿಸಿದ್ದು (ಉದಾ:ರಂಗಸೂಚನೆಗಳನ್ನು ಸಮರ್ಪಕವಾಗಿ ಬಳಸುವುದು), ವಿದ್ಯಾರ್ಥಿಗಳನ್ನು **ಕಲಿಕೆಯ** ಮೌಲ್ಯಮಾಪನ ಮಾಡುವುದನ್ನು ಉತ್ತೇಜಿಸುವುದಕ್ಕಿಂತ, ಶಿಕ್ಷಕರು ಅಥವಾ ವಿದ್ಯಾರ್ಥಿಗಳು ತಮಗೆ ತಾವೇ **ಕಲಿಕೆಗಾಗಿ** ಮೌಲ್ಯಮಾಪನ ಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ.

ಶಿಕ್ಷಕರು ಕಲಿಕೆಗಾಗಿ ಮೌಲ್ಯಮಾಪನದೆಡೆಗೆ ಹೋಗುವುದಕ್ಕೆ ಬೆಂಬಲ ನೀಡಲು ಸಾಕಷ್ಟು ಸಮಯಾವಕಾಶ ಅವಶ್ಯಕತೆಯಿದೆ: ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು, ಮೌಲ್ಯಮಾಪನದ ಅವಕಾಶಗಳನ್ನು ಯೋಜಿಸುವುದು, ಮತ್ತು ಮಾನಕ (rubric) ಗಳನ್ನು ಅಭಿವೃದ್ಧಿಪಡಿಸುವುದು

ಮಾತ್ರವಲ್ಲ, ತರಗತಿಯಲ್ಲಿ ವಿಭಿನ್ನವಾದ ಸಂಭಾಷಣೆಯನ್ನು ಅಭಿವೃದ್ಧಿಪಡಿಸುವುದು /ಬೆಳೆಸುವುದೂ ಮುಖ್ಯ. ಈ ಸಂಭಾಷಣೆಯು ಶಿಕ್ಷಕರು-ವಿದ್ಯಾರ್ಥಿಗಳ ನಡುವೆ ಮಾನಕಗಳನ್ನು ಬಳಸಿಕೊಂಡು ಅವರ ಕಲಿಕೆಯನ್ನು ಮತ್ತು ಕಲಿಕೆಗಾಗಿ ಮುಂದಿನ ಹಂತಗಳನ್ನು ಚರ್ಚಿಸಲು ಆಗಿರಬಹುದು, ಆದರೆ ವಿದ್ಯಾರ್ಥಿಗಳನ್ನು ಅವರ ಸ್ವಕಲಿಕೆಯನ್ನು ಅರ್ಥಮಾಡಿಕೊಳ್ಳಲು ಹಾಗೂ ನಿಯಂತ್ರಣವನ್ನು ಹೊಂದಲು ಸಹಾಯಕವಾಗುವಂತಹ ಸ್ವ ಮತ್ತು ಸಹ ಮೌಲ್ಯಮಾಪನದಲ್ಲಿ ಸಮಾನವಾಗಿ ತೊಡಗಿಸಿಕೊಳ್ಳಬೇಕು.



**ಚಿತ್ರ 3**: ಜೊತೆಯಲ್ಲಿ ಚಟುವಟಿಕೆಯನ್ನು ಮಾಡುತ್ತಿರುವುದು.

ನಿಮಗೆ ಈ ಮೊದಲು ಮಾನಕಗಳನ್ನು ಬಳಸಿ ಅಭ್ಯಾಸವಿಲ್ಲದಿದ್ದರೆ, ಸಂಪನ್ಮೂಲ-3 ರಲ್ಲಿ ನೀಡಿರುವ ಮಾರ್ಗದರ್ಶನವನ್ನು ನೋಡಿ, ಇದರಿಂದ ಮಾನಕವನ್ನು ಹೇಗೆ ಬರೆಯುವುದು ಹಾಗೂ ವಿದ್ಯಾರ್ಥಿಗಳು ಜ್ಞಾನ ಮತ್ತು ಕೌಶಲ್ಯಕ್ಕೆ ಸಂಬಂಧಿಸಿದ ಮಾನದಂಡಗಳನ್ನು ಎಷ್ಟರ ಮಟ್ಟಿಗೆ ತಲುಪಿರುವರು ಎಂಬುದನ್ನು ಮೌಲ್ಯಮಾಪನ ಮಾಡುವುದನ್ನು ತಿಳಿಯಲು ಬಳಸಬಹುದು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ನಿಮ್ಮ ಶಿಕ್ಷಕರು ಈ ವಿಧಾನವನ್ನು ಅನುಸರಿಸುವುದನ್ನು ಪ್ರೋತ್ಸಾಹಿಸಲು ನೀವು ಒಂದು ರಚನಾತ್ಮಕ ಮೌಲ್ಯಮಾಪನದ ನಮೂನೆಯನ್ನು ಸಿದ್ದಪಡಿಸಬಹುದು.

## ಚಟುವಟಿಕೆ 4: ಮಾನಕವನ್ನು ಬಳಸುವ ಒಂದು ಉದಾಹರಣೆ

ಈ ಕೆಳಗೆ ಶಿಕ್ಷಕರು ಮತ್ತು ವಿದ್ಯಾರ್ಥಿಯ ನಡುವೆ ಅಂಕ ನೀಡಲಾದ ಕಾರ್ಯಕ್ಕೆ (Marked assignment) ಮತ್ತು ಮೌಲ್ಯಮಾಪನಾ ಮಾನಕ (rubric)ವನ್ನು ಬಳಸಿಕೊಂಡು ಆದ ಸಂಭಾಷಣೆಯ ಉದಾಹರಣೆಯನ್ನು ನೀಡಲಾಗಿದೆ. ಇದನ್ನು ಓದುತ್ತಿರುವಾಗ, ಶಿಕ್ಷಕರು ತಮ್ಮ ವಿದ್ಯಾರ್ಥಿಯ ಕಲಿಕೆಗೆ ಬೆಂಬಲಿಸಲು ಏನು ಮಾಡಿದರು ಎಂಬುದನ್ನು ಗಮನಿಸಿ ನಿಮ್ಮ ಕಲಿಕಾ ಡೈರಿಯಲ್ಲಿ /ಪುಸ್ತಕದಲ್ಲಿ ಬರೆಯಿರಿ. ಈ ಸಂಭಾಷಣೆಯನ್ನು ನಿಮ್ಮ ಶಾಲೆಯಲ್ಲಿಯೇ ಅವಲೋಕಿಸಿದ್ದೀರಿ ಎಂದು ಭಾವಿಸಿಕೊಂಡು, ಶಿಕ್ಷಕರಿಗೆ ಯಾವ ಹಿಮ್ಮಾಹಿತಿಯನ್ನು ನೀಡುತ್ತೀರಾ ಎಂಬುದನ್ನು ಯೋಚಿಸಿರಿ.

**ಶಿಕ್ಷಕ** ತೆಗೋ ನಿನ್ನ ಉತ್ತರಪತ್ರಿಕೆ, ಕಳೆದ ಪರೀಕ್ಷೆಗೆ ಹೋಲಿಸಿದರೆ ನಿನ್ನ ಶ್ರೇಣಿ ಉತ್ತಮಗೊಂಡಿದೆ. ಇದನ್ನೊಮ್ಮೆ ನೋಡು ಮತ್ತೆ ನೀನು ಏನನ್ನು ಚೆನ್ನಾಗಿ ಮಾಡಿದ್ದೀಯಾ? ಇನ್ನೂ ಎಲ್ಲಿ ಉತ್ತಮಪಡಿಸಿಕೊಳ್ಳುವ ಅಗತ್ಯವಿದೆ ಎಂಬುದನ್ನು

| | |
|---|---|
| | ನೋಡಿ ನನಗೆ ಹೇಳು. |
| **ವಿದ್ಯಾರ್ಥಿ** | ನನಗೆ ಎ ಶ್ರೇಣಿ ಬೇಕಿತ್ತು, ಆದರೆ ನೀವು ನನಗೆ ಬಿ+ ಕೊಟ್ಟಿದ್ದೀರಿ, ಇದು ನನಗೆ ಸರಿ ಕಾಣುತ್ತಿಲ್ಲ!, ನಾನು ಎಲ್ಲದ್ದಕ್ಕೂ ಉತ್ತರಿಸಿದ್ದೀನಿ. ನಾನು ಏನನ್ನು ಬಿಟ್ಟಿದ್ದೇನೆ ಎಂಬುದು ನನಗೆ ಹೇಳಗಾಗುತ್ತಿಲ್ಲ. |
| **ಶಿಕ್ಷಕ** | ಸರಿ, ಹಾಗಿದ್ದರೆ, ಇಬ್ಬರೂ ಕೂಡಿ ಮಾನಕಗಳನ್ನು ನೋಡೋಣ. ಎರಡನೇ ಮಾನದಂಡವು ರಾಣಿ ಲಕ್ಷ್ಮಿಬಾಯಿಯ ತೀರ್ಮಾನದ ಕಾರಣವನ್ನು ಅನುಕ್ರಮದಲ್ಲಿ ಬರೆಯುವುದಕ್ಕೆ ಸಂಬಂಧಿಸಿದೆ. |
| **ವಿದ್ಯಾರ್ಥಿ** | ಸರಿ, ನನ್ನ ಪ್ರಕಾರ ಇದು ಸರಿಯಾದ ಅನುಕ್ರಮ! |
| **ಶಿಕ್ಷಕ** | ನೀನು ಬರೆದ ಅನುಕ್ರಮವು ಉತ್ತಮವಾದುದೆಂದು ನಿನಗೆ ಅನಿಸುತ್ತಿದೆ ಎಂದು ನಾನು ಅರ್ಥಮಾಡಿಕೊಳ್ಳಬಲ್ಲೆ. ಇತಿಹಾಸದಲ್ಲಿ ನಾವು ನಮ್ಮ ನಿಲುವಿನಿಂದ ಹೊರಬಂದು, ತೀರ್ಮಾನವನ್ನು ತೆಗೆದುಕೊಳ್ಳುವವರ ದೃಷ್ಟಿಕೋನದಿಂದ ಯೋಚಿಸಬೇಕಾದ ಅಗತ್ಯವಿದೆ. ಈಗ ನೋಡೋಣ- ಯಾಕೆ ನಿನಗೆ ತತ್ ಕ್ಷಣದ ಕಾರಣದಿಂದ ಪ್ರಾರಂಭಿಸಿ ಆನಂತರ, ಘರ್ಷಣೆಯನ್ನು ಉಲ್ಬಣಿಸಿದ ಕಾರಣದ ಬಗ್ಗೆ ಚರ್ಚೆ ಮಾಡಬೇಕು ಎಂದೆನ್ನಿಸಿತು?. |
| **ವಿದ್ಯಾರ್ಥಿ** | ನಿಜ ಹೇಳಬೇಕೆಂದರೆ, ನಾನೂ ಸಹ ಸಾಮಾನ್ಯವಾಗಿ  ತತ್ ಕ್ಷಣದ ಕಾರಣ ಅಷ್ಟೊಂದು ಮುಖ್ಯವಾಗಿರುವುದಿಲ್ಲ ಎಂದು ಊಹಿಸಿದ್ದೆ.. ನಿಮಗೂ ತಿಳಿದಿದೆ ಎಷ್ಟೊ ವರ್ಷಗಳಿಂದ ನಡೆಯುತ್ತಿದ್ದ ನ್ಯಾಯವಲ್ಲದ ತೀರ್ಮಾನಗಳಿಂದ ಅವರೆಷ್ಟು ಕೋಪಗೊಂಡಿದ್ದರು ಹಾಗೂ ಸಿಡಿಮದ್ದಿನ /ತೋಪಿನ ಬಗೆಗಿನ ವದಂತಿಯನ್ನು ನೆಪವಾಗಿ ಬಳಸಿಕೊಂಡರು ಎಂದು. |
| **ಶಿಕ್ಷಕ** | ನೀನು ಸ್ವಲ್ಪ ಬೇಜಾರಾಗಿದ್ದೀಯಾ ಆದರೂ ದಿಟ್ಟವಾಗಿ ಯೋಚಿಸುತ್ತಿದ್ದೀಯಾ! ನಿನ್ನ ಊಹೆ ನಿಜವಾಗಿಯೂ ಸರಿಯಾಗಿದೆ. ಅದಕ್ಕೆ ಯಾವಾಗ ನೀನು ತತ್ ಕ್ಷಣದ ಕಾರಣಗಳಿಂದ ಪ್ರಾರಂಭಿಸುತ್ತೀಯೋ, ಆಗನೆಪಕ್ಕೆ ಹೆಚ್ಚು ಒತ್ತುಕೊಟ್ಟು ಹೇಳುವೆ. ನಂತರ ಕಾಲಾಂತರದಲ್ಲಿ ಬಂದಂತಹ ಕಾರಣಗಳನ್ನು ವ್ಯವಸ್ಥಿತವಾಗಿ ಗುರುತಿಸುತ್ತಾ ಹೋಗುತ್ತೀಯ ಮತ್ತು ಯಾವುದಾದರೊಂದು ಕಾರಣವನ್ನು ಬಲವಾದ ಕಾರಣವನ್ನಾಗಿಸುವ ಶ್ರೇಣಿಯನ್ನು ಗುರುತಿಸುತ್ತಾ ಹೋಗುವೆ. |
| **ವಿದ್ಯಾರ್ಥಿ** | ನೀವು ಏನು ಹೇಳುತ್ತಾ ಇರುವಿರಿ ಎಂಬುದು ನನಗೆ ಗೊತ್ತಾಗುತ್ತಿದೆ. ಕಾರಣವನ್ನು ಅನುಕ್ರಮವಾಗಿ ಹೇಳುವ ಸಂಧರ್ಭದಲ್ಲಿ ಜಾಗರೂಕನಾಗಿರಬೇಕು ಮತ್ತು ಆ ಅನುಕ್ರಮ ತರ್ಕಬದ್ಧವಾಗಿರಬೇಕು/ ನಾನು ತರ್ಕವನ್ನೂ ಸಹ ಹೊಂದಿರಬೇಕು. |
| **ಶಿಕ್ಷಕ** | ಖಂಡಿತವಾಗಿಯೂ. ಅದೇ ರೀತಿ ಮಾಡು. ನಿನಗೆ ಮುಂದಿನ ವಾರದ ಪರೀಕ್ಷೆಯಲ್ಲಿ / ಮೌಲ್ಯಮಾಪನದಲ್ಲಿ ಎ ಶ್ರೇಣಿಯನ್ನು ನೀಡುವುದಿಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ. ನೀನು ಬಹಳ ಚೆನ್ನಾಗಿ ಬರೆದಿರುವೆ. |
| **ವಿದ್ಯಾರ್ಥಿ** | ಬಹಳ ಧನ್ಯವಾದಗಳು! ನಾನು ಈ ಅನುಕ್ರಮವನ್ನು ತರ್ಕಬದ್ದವಾಗಿ/ ಆಲೋಚನಾಶೀಲವಾಗಿ ಬರೆದರೆ, ಅದನ್ನು ನೀವೊಮ್ಮೆ ನೋಡುವಿರೇನು? |
| **ಶಿಕ್ಷಕ** | ಖಂಡಿತ! ಮನೆಯಲ್ಲಿ ಅದನ್ನು ಮಾಡಿಕೊಂಡು ಬಂದು, ನಾಳೆ ನನಗೆ ತೋರಿಸು. |
| **ವಿದ್ಯಾರ್ಥಿ** | ಮತ್ತೊಮ್ಮೆ ಧನ್ಯವಾದಗಳು, ಇದು ಬಹಳ ಸಹಾಯಕವಾಗಿದೆ. |

**ಚರ್ಚೆ**

ಈ ಸಂಭಾಷಣೆಯು ಶ್ರೇಣಿಯನ್ನು ನೀಡಿದ ನಂತರ ಪ್ರಾರಂಭವಾಗಿದೆ. ವಿದ್ಯಾರ್ಥಿ ರಕ್ಷಣಾತ್ಮಕವಾಗಿ ಪ್ಮತ್ತು ಕೋಪದಿಂದ ಪ್ರಾರಂಭಿಸಿದನು. ಶ್ರೇಣಿಯ ಕಾರಣದಿಂದ ಈ ಪರಿಣಾಮ ಉಂಟಾದುದು, ಶ್ರೇಣಿ ನೀಡುವ ಮೊದಲು ವಿದ್ಯಾರ್ಥಿಯೊಂದಿಗೆ ಈ ಬಗ್ಗೆ ಚರ್ಚೆಯನ್ನು ಕೈಗೊಂಡಿದ್ದಲ್ಲಿ, ವಿದ್ಯಾರ್ಥಿ ಆ ಶ್ರೇಣಿಯನ್ನು ಸುಲಭವಾಗಿ ಸ್ವೀಕರಿಸುತ್ತಿದ್ದ. ಈಗಾಗಲೇ ಗಮನಿಸಿರುವಂತೆ, ತನ್ನನ್ನು ಉತ್ತಮಪಡಿಸಿಕೊಳ್ಳವಲ್ಲಿ ಹೆಚ್ಚು ಆಸಕ್ತಿಯನ್ನೂ ಸಹ ಹೊಂದಿದ್ದ. ಈ ಅಧಿವೇಶನದ ಅಂತ್ಯದಲ್ಲಿ ಏನು ಮಾಡಬೇಕೆಂಬುದು ತಿಳಿದಿತ್ತು ಹಾಗೂ ಹೆಚ್ಚು ಮಾನಕಗಳನ್ನು ಬಳಸುವ ಮೂಲಕ ಅವಳು ತಂತಾನೆ ಅರ್ಥಮಾಡಿಕೊಂಡಿದ್ದಳೂ ಕೂಡ. ಈ ಸಂಭಾಷಣೆಯಲ್ಲಿ ವಿದ್ಯಾರ್ಥಿ ಏನನ್ನು ಸಾಧಿಸಿದ್ದಾನೆ ಮತ್ತು ಯಾವುದನ್ನು ಉತ್ತಮಪಡಿಸಿಕೊಳ್ಳಬೇಕಾಗಿದೆ ಎಂಬುದನ್ನು ತಿಳಿಸುವ ಮಾನದಂಡಗಳನ್ನು ಹೊಂದಿರುವ ಸ್ಪಷ್ಟ ಮಾನಕಗಳನ್ನು ಬಳಸಿರುವುದನ್ನು ಗಮನಿಸಬಹುದಾಗಿದೆ.ಶ್ರೇಣಿಗಳ ಬಗ್ಗೆ ಚರ್ಚೆಯನ್ನು ಕೈಗೊಳ್ಳುವ ಬದಲು, ಏನನ್ನು ಸಾಧಿಸಲಾಗಿದೆ, ಅವರಿಗೆ ತಾವು ಯಶಸ್ವಿಯಾಗಿಲ್ಲ ಎಂಬ ಭಾವನೆಯು ಬರದಂತೆ ಇನ್ನೇನು ಸಾಧಿಸಿ ಪ್ರಗತಿ ಹೊಂದಬಹುದು ಎಂಬ ಬಗ್ಗೆ ಸಂವಾದ ಮಾಡಬಹುದು.

ಈ ರೀತಿಯಲ್ಲಿ ಕಲಿಕೆಯನ್ನು ಚರ್ಚಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದಕ್ಕೆ ಇತರ ಶಿಕ್ಷಕರಿಗೆ ಬೆಂಬಲ ನೀಡಲು ಜಾಗರೂಕ ಯೋಜನೆಯ ಅವಶ್ಯಕತೆಯಿದೆ. ನೀವು ಶಿಕ್ಷಕರನ್ನು ಅವರ ಸ್ವಂತ ಪ್ರಕರಣ ಅಧ್ಯಯನವನ್ನು ಬರೆದು, ಹಂಚಿಕೊಳ್ಳಲು ತಿಳಿಸುವ ಅಥವಾ ಪಾಠಗಳನ್ನು ವೀಕ್ಷಿಸುವ, ಮತ್ತು ಪರಿಣಾಮಕಾರಿ ರಚನಾತ್ಮಕ ಮೌಲ್ಯಮಾಪನವನ್ನು ಪ್ರಶಂಸಿಸುವುದನ್ನು ಮಾದರಿ ಪರಿಣಾಮಕಾರಿ ಅಭ್ಯಾಸಗಳ ಅವಕಾಶಗಳೆಂದು ಪರಿಗಣಿಸಬಹುದು.

ನೀವು ವಿದ್ಯಾರ್ಥಿಗಳನ್ನು ರಚನಾತ್ಮಕ ಮೌಲ್ಯಮಾಪನದಲ್ಲಿ ತೊಡಗಿಸಿಕೊಳ್ಳಲು ಬೆಂಬಲ ನೀಡಲು ಇಚ್ಛೆಪಡುತ್ತಿರಬಹುದು-ನೀವು ಗಮನಿಸಿರಬಹುದು ಮೊದಲಿಗೆ ವಿದ್ಯಾರ್ಥಿಯು ಕೇವಲ ಶ್ರೇಣಿಯ ಬಗ್ಗೆ ಚರ್ಚಿಸಲು ಆಸಕ್ತಿ ಹೊಂದಿದ್ದನೇ ವಿನಃ ಹೇಗೆ ಉತ್ತಮಪಡಿಸಿಕೊಳ್ಳಬಹುದೆಂಬ ಚರ್ಚೆಯಲ್ಲಲ್ಲ. ತರಗತಿಯಲ್ಲಿ ರಚನಾತ್ಮಕ ಮೌಲ್ಯಮಾಪನವು ರೂಢಿ/ನಡವಳಿಕೆಯಾಗಿಬಿಟ್ಟರೆ, ವಿದ್ಯಾರ್ಥಿಗಳು ಇದರಲ್ಲಿ ತೊಡಗಿಕೊಳ್ಳುವರು ಮತ್ತು ಹೆಚ್ಚು ಸ್ವ-ಕಲಿಕಾರ್ಥಿಗಳಾಗಿ ರೂಪುಗೊಳ್ಳುವರು (self-sufficient learners).

# 5 ವಿದ್ಯಾರ್ಥಿಗಳ ಪ್ರಗತಿಯ ಪಥವನ್ನು ಅರಿಯಲು ಮೌಲ್ಯಮಾಪನದ ದತ್ತಾಂಶವನ್ನು ಬಳಸುವುದು

ವಿದ್ಯಾರ್ಥಿಗಳಿಗೆ, ಕಲಿಕಾರ್ಥಿಗಳಾಗಿ ಸಮಗ್ರವಾಗಿ ಬೆಳವಣಿಗೆ ಹೊಂದಲು ಸಹಾಯ ಮಾಡುವುದರ ಜೊತೆಗೆ ಕಲಿಕೆಗಾಗಿ ಮೌಲ್ಯಮಾಪನವು ಶಿಕ್ಷಕರು ನಿರಂತರವಾಗಿ ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ದತ್ತಾಂಶವನ್ನು ಕಲೆಹಾಕಲೂ ಸಹ ಅನುವು ಮಾಡಿಕೊಡುತ್ತದೆ. ಇದು ಹೆಚ್ಚು ವೈಯಕ್ತೀಕರಿಸಿದ ಮತ್ತು ಗುರಿಯನ್ನು ಹೊಂದಿದ ಚಟುವಟಿಕೆಗಳು ಮತ್ತು ಪ್ರತೀ ವಿದ್ಯಾರ್ಥಿಗೆ ಅನುಗುಣವಾದ ಹಿಮ್ಮಾಹಿತಿಗಳನ್ನು ನೀಡಲು ಅನುವು ಮಾಡಿಕೊಡುತ್ತದೆ.ಇದನ್ನು ವಿಭಿನ್ನತೆ (differentiation) ಎಂದು ಕರೆಯುವರು.

ಕೆಲವು ವಿದ್ಯಾರ್ಥಿಗಳು ವೇಗವಾಗಿ ತಮ್ಮ ಕಲಿಕೆಯಲ್ಲಿ ವೃದ್ಧಿಯನ್ನು ಹೊಂದುತ್ತಾರೆ, ಹಂತಹಂತವಾಗಿ ವೃದ್ಧಿಯಾಗುತ್ತಾರೆ. ಯಾವ ಶಿಕ್ಷರರಿಗೆ ತಮ್ಮ ವಿದ್ಯಾರ್ಥಿಗಳ ಕಲಿಯುವಿಕೆಯ ರೀತಿಯ ಬಗ್ಗೆ ಅರಿವಿರುತ್ತದೆಯೋ ಅವರು ತರಗತಿಯ ವಿಭಿನ್ನ ಅಗತ್ಯವನ್ನು ಪೂರೈಸುವಂತಹ, ಒಂದೇ ಸಮಯದಲ್ಲಿ ನಡೆಸಬಹುದಾದಂತಹ ವೈವಿದ್ಯಮಯ ಚಟುವಟಿಕೆಗಳನ್ನು ಹೊಂದಿರುತ್ತಾರೆ. ಪ್ರತೀ ವಿದ್ಯಾರ್ಥಿಗೂ ಸವಾಲನ್ನು ನೀಡುವುದು ಇದರ ಗುರಿಯಾಗಿದ್ದು, ಇದರಿಂದ ಯಾವೊಬ್ಬ ವಿದ್ಯಾರ್ಥಿಯೂ ಹಿಂದುಳಿಯುವುದಿಲ್ಲ ಹಾಗೂ ಹೆಚ್ಚು ಪ್ರಗತಿಯನ್ನು ಹೊಂದುತ್ತಿರುವವರೂ ಸಹ ತಾವು ಪರಿಣಾಮಕಾರಿಯಾಗಿ ಕಲಿಯುತ್ತಿದ್ದೇವೆ ಎಂದು ಭಾವಿಸುವರು. ತರಗತಿಯಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮದೇ ಆದ ಪ್ರಾರಂಭಿಕ ಹಂತವನ್ನು ಹೊಂದಿರುವರು.ಪ್ರತಿಯೊಬ್ಬ ವಿದ್ಯಾರ್ಥಿಯ ಎಲ್ಲೆ/ಹಿನ್ನಲೆ / baseline ಯನ್ನು ಶಿಕ್ಷಕರು ಅರಿತಿರಬೇಕು. ಇದು ಶಿಕ್ಷಕರು ತರಗತಿಯ ಎಲ್ಲಾ ವಿದ್ಯಾರ್ಥಿಗಳ ಅಗತ್ಯಕ್ಕೆ ಸಮರ್ಪಕವಾಗಿರುವ ಚಟುವಟಿಕೆಗಳನ್ನು ಯೋಜಿಸಬಹುದು ಮತ್ತು ಈ ಚಟುವಟಿಕೆಗಳು ಆಧಾರದ ಮೇಲೆ

ಪ್ರತಿಯೊಬ್ಬ ವಿದ್ಯಾರ್ಥಿಯೂ ಪರಿಣಾಮಕಾರಿಯಾಗಿ ಕಲಿಯುವಂತೆ ಮಾಡಲು ರಚನಾತ್ಮಕ ಹಿಮ್ಮಾಹಿತಿಯನ್ನು ವಿಭಿನ್ನವಾಗಿ ಹೇಳಬಹುದು.

## ಚಟುವಟಿಕೆ 5: ವಿದ್ಯಾರ್ಥಿಗಳ ಪ್ರಗತಿಯ ಪಥವನ್ನು ಹಿಡಿಯಲು ಮೌಲ್ಯಮಾಪನದ ದತ್ತಾಂಶವನ್ನು ಬಳಸುವುದು

ನೀವು ನಿಮ್ಮ ಶಿಕ್ಷಕರನ್ನು ಹೇಗೆ ಪರೀಕ್ಷಿಸಬಹುದೆಂದು ಯೋಚಿಸಲು ಸಮಯ ನೀಡಿರಿ:

- ಅವರು ಬೋಧಿಸುವ ತರಗತಿಯಲ್ಲಿನ ವಿದ್ಯಾರ್ಥಿಗಳ baseline ಹೊಂದಿರಿ.
- ವಿಭಿನ್ನ ಬಗೆಯ /ವಿಕಲಜನ್ಯ ಕಲಿಕೆಯನ್ನು ಒದಗಿಸಿ.
- ರಚನಾತ್ಮಕ ಮೌಲ್ಯಮಾಪನವನ್ನು ದಾಖಲೀಕರಿಸುವುದು.
- ಅವರ ವಿದ್ಯಾರ್ಥಿಗಳನ್ನು track ಮಾಡುವುದು.

ನಿಮ್ಮ ಕಲಿಕಾ ಡೈರಿಯಲ್ಲಿ /ಪುಸ್ತಕದಲ್ಲಿ ಮಾಹಿತಿಯ ಮೂಲಗಳನ್ನು ಹೇಗೆ ಬಳಸಬಹುದು ಮತ್ತು ಹೇಗೆ ಸಾಕ್ಷಿ-ಊಹೆಗಳನ್ನು ಮತ್ತು ಖ್ಯಾತಿಯನ್ನು ಪಡೆಯುವುದು ಎಂಬುದನ್ನು ಬರೆದುಕೊಳ್ಳಿ. ನೀವು ಪ್ರಸ್ತುತ ಈ ಅಭ್ಯಾಸಗಳ ಬಗ್ಗೆ ಬಹಳ ಕಡಿಮೆ ಧೃಢ ಸಾಕ್ಷಿಗಳನ್ನು ಹೊಂದಿರಬಹುದು ಮತ್ತು ನಿಮ್ಮ ನೋಟ್ಸ್ ಈ ಬಗೆಯ ದತ್ತಾಂಶಗಳನ್ನು ಪಡೆಯಲು ಏನು ಮಾಡಬಹುದು ಎಂಬುದನ್ನು ಒಳಗೊಂಡಿರಬೇಕು.

**ಚರ್ಚೆ:-**

ನಿಮ್ಮ ಶಾಲೆಯ ಸಂಧರ್ಭ/ಸನ್ನಿವೇಶಕ್ಕನುಗುಣವಾಗಿ ನಿಮ್ಮ ಶಿಕ್ಷಕರು ಅವರ ನಿತ್ಯ ಅಭ್ಯಾಸದ ಭಾಗವಾಗಿಯೇ ಮೌಲ್ಯಮಾಪನವನ್ನು ಮಾಡುತ್ತಿಬಹುದು. ಇಲ್ಲವೇ ಅವರು ಇದರ ಸಾಮರ್ಥ್ಯವನ್ನು ಅರಿಯುವ ಮೊದಲ ಹಂತದಲ್ಲಿದ್ದಾರೆ ಎಂದು ನಿಮಗನ್ನಿಸುತ್ತಿರಬಹುದು. ನೀವು ಯಾವುದೇ ಸನ್ನಿವಾಶದಲ್ಲಿರಲಿ/ ಸ್ಥಾನದಲ್ಲಿರಲಿ, ಕಲಿಕೆಯ ಉನ್ನತೀಕರಣಕ್ಕಾಗಿ ಮೌಲ್ಯಮಾಪನಕ್ಕೆ ಸಾಕಷ್ಟು ಸಮಯ ಮತ್ತು ಪ್ರಯತ್ನ ನೀಡಬೇಕಾಗುತ್ತದೆ. ಏಕೆಂದರೆ, ಬೋಧನೆಯ ಹಲವಾರು ಅಂಶಗಳಾದ, ಅಂದರೆ ತರಗತಿ ಚಟುವಟಿಕೆಗಳು, ಮೌಲ್ಯಮಾಪನದ ಸ್ವಭಾವ ಮತ್ತು ಉದ್ದೇಶ, ಶಿಕ್ಷಕರು-ವಿದ್ಯಾರ್ಥಿಗಳ ಸಂಭಾಷಣೆಯ ಬಗೆಯಂತಹ ಅಂಶಗಳಿಗೆ ಬೆಂಬಲವನ್ನು ನೀಡುತ್ತದೆ. ಈ ರೀತಿಯ ಬದಲಾವಣೆಯನ್ನು ತರಲು ಜಾಗರೂಕವಾಗಿ ಯೋಜನೆ ಮತ್ತು ಮೇಲ್ವಿಚಾರಣೆ ಮಾಡುವ ಅಗತ್ಯವಿದೆ, ಇವೆರಡೂ ನಿಮ್ಮ ಸನ್ನಿವೇಶ / ಪರಿಸ್ಥಿತಿ ಮತ್ತು ಎಷ್ಟು ಶಿಕ್ಷಕರೊಂದಿಗೆ ನೀವು ಕೆಲಸ ಮಾಡುತ್ತಿದ್ದೀರಿ ಎಂಬುದನ್ನು ಅವಲಂಬಿಸಿದೆ. ಚಿಕ್ಕ ಶಾಲೆಗಳಲ್ಲಿ, ಎಲ್ಲಾ ಶಿಕ್ಷಕರೊಂದಿಗೆ ನೀವು ನಿಮ್ಮ ಆಲೋಚನೆ/ಕಲ್ಪನೆಗಳನ್ನು ಚರ್ಚಿಸಬಹುದು, ಹಾಗೂ ಬದಲಾವಣೆಯನ್ನು ಅವಲೋಕಿಸುವುದರ ಮೂಲಕ, ಆಲೋಚನೆಗಳನ್ನು ಹಂಚಿಕೊಳ್ಳುವ ಮೂಲಕ, ಫಲಿತಾಂಶಗಳನ್ನು ಚರ್ಚಿಸುವುದರ ಮೂಲಕ ನಿಗಾವಣೆ ಮಾಡಬಹುದು. ಆದರೆಮದೊಡ್ಡ ಸನ್ನಿವೇಶ /ಸಂಧರ್ಭಗಳಲ್ಲಿ ಒಂದು ಸಣ್ಣ ಗುಂಪಿನ ಶಿಕ್ಷಕರೊಂದಿಗೆ ಕಾರ್ಯನಿರ್ವಹಿಸಿ, ಉದಾಹರಣೆಗಳನ್ನು ಸೃಷ್ಟಿಸುವುದರ ಮೂಲಕ ಶಾಲೆಯ ಇತರ ಶಿಕ್ಷಕರು ಇದನ್ನು ಕಲಿಯುವಂತೆ ಮಾಡಬಹುದು.

ಇಲ್ಲಿ ಸಂಗ್ರಹಿಸಿದ ದತ್ತಾಂಶಗಳು ಸಾಕ್ಷಾಧಾರಗಳನ್ನು ನೀಡುತ್ತವೆ, ಇದರ ಆಧಾರದ ಮೇಲೆ ಒಂದು ಉತ್ತಮ ಬೋಧನಾ ತಂತ್ರವನ್ನು ಮತ್ತು ತರಗತಿಗೆ ಮತ್ತು ಪ್ರತೀ ವಿದ್ಯಾರ್ಥಿಗಳಿಗೆ ಅಲ್ಪ-ಧೀರ್ಘ ಕಾಲಿಕ ಯೋಜನೆಗಳನ್ನು ಯೋಜಿಸಬಹುದಾಗಿದೆ. ಕಲಿಕೆಯ ಹಂತಗಳನ್ನು, ಗ್ರಹಿಕೆಯನ್ನು, ಕೌಶಲ್ಯ ಮತ್ತು ಮನೋಭಾವವನ್ನು ಊಹಿಸುವುದಕ್ಕಿಂತ, ರಚನಾತ್ಮಕ ಮೌಲ್ಯಮಾಪನವು ವಾಸ್ತವಿಕ ಶ್ರೇಣಿಗಳ ದೃಢ ಸಾಕ್ಷಾಧಾರಗಳನ್ನು ಮತ್ತು ಪ್ರತೀ ವಿದ್ಯಾರ್ಥಿಯ ಹಾಗೂ ತರಗತಿಯ ಪ್ರಗತಿಯನ್ನು ಮಾಪನ ಮಾಡಲು ಎಲ್ಲೆ /ಆಧಾರವನ್ನು (Baseline) ನೀಡುತ್ತದೆ.

# 6 ಸಾರಾಂಶ

ಈ ಘಟಕವು ಶಾಲೆಯೊಳಗೆ ಹೆಚ್ಚು ಸಹಾಯಕ ಮೌಲ್ಯಮಾಪನ ತಂತ್ರಗಳನ್ನು ಸೃಷ್ಟಿಸುವಲ್ಲಿ ಕಲಿಕೆಗಾಗಿ ಮೌಲ್ಯಮಾಪನದ ಪಾತ್ರವನ್ನು ಪರಿಗಣಿಸಿದೆ /ವಿವರಿಸಿದೆ.ರಚನಾತ್ಮಕ ಮೌಲ್ಯಮಾಪನವು ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯಲ್ಲಿ ಪ್ರಗತಿ ಹೊಂದಲು ಮತ್ತು ಅವರನ್ನು ಹೆಚ್ಚು ಪರಿಣಾಮಕಾರಿ ಕಲಿಕಾರ್ಥಿಗಳನ್ನಾಗಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುವಂತಹ ತಕ್ಷಣ ಮತ್ತು ವಿಭಿನ್ನೀಕರಿಸಿದ ಹಿಮ್ಮಾಹಿತಿಯನ್ನು ನೀಡುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಗುರುತಿಸಿದೆ

ಈ ಘಟಕವು ಶಿಕ್ಷಕರು ತಮ್ಮ ತರಗತಿಗಳಲ್ಲಿ ಕಲಿಕಾ ತಂತ್ರಗಳ ಮೌಲ್ಯಮಾಪನವನ್ನು ಮಾಡಲು ಬಳಸಬಹುದಾದ ಕೆಲವು ತಂತ್ರಗಳ ಸಲಹೆಯನ್ನು ನೀಡಲಾಗಿದೆ.ಇದು ಪ್ರಸ್ತುತ ಅಭ್ಯಾಸವನ್ನು ಗುರುತಿಸುವುದರೊಂದಿಗೆ, ಮೌಲ್ಯಮಾಪನಗಳ ಮಾನಕಗಳನ್ನು ಅಭಿವೃದ್ಧಿಪಡಿಸುವಿಕೆ ಮತ್ತು ಬಳಕೆಗಳ ಗ್ರಹಿಕೆ /ಅರ್ಥಮಾಡಿಕೊಳ್ಳುವಿಕೆಯನ್ನು ಸಹ ಒಳಗೊಂಡಿದೆ.

ಈ ಘಟಕವು ಬೋಧನಾ-ಕಲಿಕಾ ಪ್ರಕ್ರಿಯೆಯ ವರ್ಗಾವಣೆಯ ಮುಖ್ಯಾಂಶಗಳಿಗೆ ಸಂಬಂಧಿಸಿದ ಘಟಕಗಳ ಗುಚ್ಛದ ಒಂದು ಭಾಗವಾಗಿದೆ.ನಿಮ್ಮ ಜ್ಞಾನ ಮತ್ತು ಕೌಶಲ್ಯ ಹೆಚ್ಚಿಸಿಕೊಳ್ಳಲು ಈ ಗುಚ್ಛದ ಇತರ ಘಟಕಗಳನ್ನು ಪರಾಮರ್ಶಿಸಬಹುದು.

- *ಪ್ರಾಥಮಿಕ ಶಾಲಲಾ ಹಂತದಲ್ಲಿ ಭೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆಯನ್ನು ಮುನ್ನಡೆಸುವುದು/ ಹೆಚ್ಚಿಸುವುದುLeading improvements in teaching and learning in the elementary school*
- *ಪ್ರೌಢಶಾಲಾ ಹಂತದಲ್ಲಿ ಭೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆಯನ್ನು ಮುನ್ನಡೆಸುವುದು/ ಹೆಚ್ಚಿಸುವುದುLeading improvements in teaching and learning in the secondary school*
- *ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಶಿಕ್ಷಕರಿಗೆ ಬೆಂಬಲಿಸುವುದು. Supporting teachers to raise performance*
- *ಶಿಕ್ಷಕರ ವೃತ್ತಿ ಬೆಳವಣಿಗೆಯನ್ನು ಮುನ್ನಡೆಸುವುದು. Leading teachers' professional development*
- *ಮೆಂಟರಿಂಗ್ ಮತ್ತು ಕೋಚಿಂಗ್ Mentoring and coaching*
- *ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿ ಕಲಿಕಾ ಸಂಸ್ಕೃತಿಯನ್ನು ಬೆಳೆಸುವುದು. Developing an effective learning culture in your school*
- *ನಿಮ್ಮ ಶಾಲೆಯಲ್ಲಿ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು. Promoting inclusion in your school*
- *ವಿದ್ಯಾರ್ಥಿಯ ಪರಿಣಾಮಕಾರಿ ಕಲಿಕೆಗೆ ಸಂಪನ್ಮೂಲಗಳನ್ನು ನಿಭಾಯಿಸುವುದು. Managing resources for effective student learning*
- *ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುವುದು. Leading the use of technology in your school.*

# ಸಂಪನ್ಮೂಲಗಳು

## ಸಂಪನ್ಮೂಲ-1 : ಪ್ರಗತಿ ಮತ್ತು ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು

ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನವನ್ನು ಎರಡು ಉದ್ದೇಶಗಳಿಂದ ಮಾಡಲಾಗುತ್ತದೆ.

- **ನಿರ್ಣಯಾತ್ಮಕ ಮೌಲ್ಯಮಾಪನ** ಈಗಾಗಲೇ ಆಗಿರುವಂತಹ ಕಲಿಕೆಯ ಬಗ್ಗೆ ತೀರ್ಪು ನೀಡುವಂತಹುದು. ಇದನ್ನು ವಿದ್ಯಾರ್ಥಿಗಳ ಸಾಧನೆಯನ್ನು ಪರೀಕ್ಷೆಯಲ್ಲಿ ನೀಡಲಾಗಿರುವ ಪ್ರಶ್ನೆಗಳ ಮೇಲೆ ಹೇಳುವ, ಗ್ರೇಡಿಂಗ್ ಮಾಡಲಾಗುವಂತಹ ಪರೀಕ್ಷೆಗಳ ರೂಪದಲ್ಲಿ ಆಗಾಗ್ಗೆ ನಡೆಸಲಾಗುತ್ತದೆ. ಇದು ಫಲಿತಾಂಶವನ್ನು ವರದಿ ಮಾಡುವಲ್ಲಿ ಸಹಾಯಕವಾಗಿದೆ,

- **ರಚನಾತ್ಮಕ ಮೌಲ್ಯಮಾಪನ** ವು ಸ್ವಲ್ಪ ವಿಭಿನ್ನವಾಗಿದ್ದು, ಇದು ಸ್ವಭಾವದಲ್ಲಿ ಹೆಚ್ಚು ಅನೌಪಚಾರಿಕ ಮತ್ತು ರೋಗನಿಧಾನ / ಕಾರಣ ನಿರೂಪಣೆಯೂ ಆಗಿದೆ. ಶಿಕ್ಷಕರು ಕಲಿಕಾ ಪ್ರಕ್ರಿಯೆಯ ಭಾಗವಾಗಿ ಇದನ್ನು ಬಳಸುತ್ತಾರೆ. ಉದಾ: ವಿದ್ಯಾರ್ಥಿಗಳು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಪ್ರಶ್ನೆಗಳನ್ನು ಕೇಳುವಂತಹುದು. ಆನಂತರದಲ್ಲಿ ಈ ಮೌಲ್ಯಮಾಪನದ ಫಲಿತಾಂಶವನ್ನು ಮುಂದಿನ ಕಲಿಕಾ ಅನುಭವವನ್ನು ಬದಲಾಯಿಸಲು ಬಳಸಲಾಗುತ್ತದೆ. ಮೇಲ್ವಿಚಾರಣೆ /ನಿಗಾವಣೆ ಮತ್ತು ಹಿಮ್ಮಾಹಿತಿಯು ರಚನಾತ್ಮಕ ಮೌಲ್ಯಮಾಪನದ ಭಾಗವಾಗಿದೆ.

ರಚನಾತ್ಮಕ ಮೌಲ್ಯಮಾಪನವು ಕಲಿಕೆಯನ್ನು ಉನ್ನತೀಕರಿಸುತ್ತದೆ, ಏಕೆಂದರೆ ಕಲಿಕೆ ಏರ್ಪಡಲು ಹೆಚ್ಚು ವಿದ್ಯಾರ್ಥಿಗಳು-

- ತಾವೇನು ಕಲಿಯಬೇಕೆಂಬುದನ್ನು ಅರಿತಿರಬೇಕು.
- ಆ ಕಲಿಕೆಯಲ್ಲಿ ತಾವೆಲ್ಲಿರುವೆನೆಂದು ತಿಳಿಸಿರಬೇಕು.
- ಅವರು ಹೇಗೆ ಪ್ರಗತಿಯನ್ನು ಸಾಧಿಸಬಹುದೆಂಬುದನ್ನು ಅರಿತಿರಬೇಕು. (ಅಂದರೆ ಏನನ್ನು, ಹೇಗೆ ಕಲಿಯಬೇಕು).
- ಯಾವಾಗ ತನ್ನ ಗುರಿ ಮತ್ತು ಅಪೇಕ್ಷಿತ ಫಲಿತಾಂಶವನ್ನು ಯಾವಾಗ ತಲುಪುವರು ಎಂಬುದನ್ನು ತಿಳಿದಿರಬೇಕು.

ಶಿಕ್ಷಕರಾಗಿ, ನೀವು ಪ್ರತಿಯೊಂದು ಪಾಠದಲ್ಲಿಯೂ ಮೇಲಿನ ನಾಲ್ಕೂ ಅಂಶಗಳನ್ನು ಅನುಸರಿಸಿದರೆ ನಿಮ್ಮ ವಿದ್ಯಾರ್ಥಿಗಳಿಂದ ಉತ್ತಮವಾದ ಫಲಿತಾಂಶವನ್ನು ಪಡೆಯಲು ಸಾಧ್ಯ, ಆದುದರಿಂದ ಈ ಮೌಲ್ಯಮಾಪನವನ್ನು ಸೂಚನೆಯ ಮೊದಲು, ನಂತರ, ಸೂಚನಾ ಸಂಧರ್ಭದಲ್ಲಿ ಮಾಡಬಹುದು /ಕೈಗೊಳ್ಳಬಹುದು

- **ಮೊದಲು /ಮುನ್ನ Before:**ಬೇಧನೆಗೆ ಮೊದಲು ಮೌಲ್ಯಮಾಪನ ಮಾಡಿದಲ್ಲಿ ವಿದ್ಯಾರ್ಥಿಗಳು ಏನನ್ನು ತಿಳಿದಿದ್ದಾರೆ ಹಾಗೂ ಏನು ಮಾಡಬಹುದು ಎಂಬುದನ್ನು ಸೂಚನೆಗೆ ಮೊದಲು ಗುರುತಿಸಲು ಸಹಾಯಕ. ಎಲ್ಲೆ (Baseline)ಯನ್ನು ನಿರ್ಧರಿಸುವಂತೆ ಮಾಡಲು, ನೀವು ಬೋಧನೆಯನ್ನು ಯೋಚಿಸಲು ಪ್ರಾರಂಭಿಕ ಅಂಶವನ್ನು (starting point)ನೀಡುವುದು. ಇದು ನಿಮ್ಮ ವಿದ್ಯಾರ್ಥಿಗಳು ಏನನ್ನು ಕಲಿತಿರುವರು /ತಿಳಿದಿರುವರು ಎಂಬುದರ ಬಗ್ಗೆ ನಿಮ್ಮ ಗ್ರಹಿಕೆಯನ್ನು ಉನ್ನತೀಕರಿಸಿ /ಹೆಚ್ಚಿಸಿ, ವಿದ್ಯಾರ್ಥಿಗಳಿಗೆ ತಿಳಿದಿರುವ ಅಂಶವನ್ನು ಮತ್ತೆ ಬೋಧಿಸುವ ಅಥವಾ ವಿದ್ಯಾರ್ಥಿಗಳು ತಿಳಿಯಲೇಬೇಕಾದ (ಆದರೆ ಇದುವರೆಗೂ ತಿಳಿದಿರದ) ಅಂಶವನ್ನು ಬಿಟ್ಟು ಬಿಡುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ.
- **ಬೋಧನಾ ಸಮಯದಲ್ಲಿ During :**ತರಗತಿ ಬೋಧನಾ ವಿಷಯದಲ್ಲಿ ಮೌಲ್ಯಮಾಪನವು ವಿದ್ಯಾರ್ಥಿಗಳುಕಲಿಯುತ್ತಿದ್ದಾರೆಯೇ ಮತ್ತು ಸುಧಾರಿಸುತ್ತಿದ್ದಾರೆಯೇ ಎಂಬುದನ್ನು ಪರೀಕ್ಷಿಸುವುದನ್ನು ಒಳಗೊಂಡಿದೆ. ಇದು ನಿಮ್ಮ ಬೋಧನಾ ವಿಧಾನ, ಸಂಪನ್ಮೂಲ ಮತ್ತು ಚಟುವಟಿಕೆಗಳಲ್ಲಿ ಸಮರ್ಪಕ ಬದಲಾವಣೆ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಇದು ಅಪೇಕ್ಷಿತ ಕಲಿಕೋದ್ದೇಶಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಹೇಗೆ ಪ್ರಗತಿ ಹೊಂದುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಹಾಗೂ ನಿಮ್ಮ ಬೋಧನೆಯು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ಅರಿಯಲು ನಿಮಗೆ ಸಹಕಾರಿಯಾಗುವುದು.
- **ನಂತರAfter**:ಈ ಮೌಲ್ಯಮಾಪನವನ್ನು ಬೋಧನೆಯ ನಂತರ ಕೈಗೊಳ್ಳಲಾಗುವುದು. ಇದು ಖಾತರಿಪಡಿಸುವುದರೊಂದಿಗೆ, ಯಾರು ಕಲಿತಿದ್ದಾರೆ ಮತ್ತು ಯಾರಿಗೆ ಬೆಂಬಲದ ಅವಶ್ಯಕತೆ ಎಂಬುದನ್ನು ತೋರಿಸುವುದು. ಇದರ ಜೊತೆಗೆ ನಿಮ್ಮ ಬೋಧನಾ ಗುರಿಯ ಪರಿಣಾಮಕಾರಿತ್ವವನ್ನು ಪರೀಕ್ಷಿಸಲು / ಸಮೀಕ್ಷಿಸಲು ಅನುವು ಮಾಡಿಕೊಡುತ್ತದೆ.

## ಮುನ್ನ .ಮೊದಲು :- ವಿದ್ಯಾರ್ಥಿಗಳು ಏನನ್ನು ಕಲಿಯುತ್ತಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟತೆಯನ್ನು ಹೊಂದುವುದು.

ನಿಮ್ಮ ವಿದ್ಯಾರ್ಥಿಗಳು ಒಂದು ಪಾಠ/ಪಾಠಗಳಿಂದ ಏನನ್ನು ಕಲಿಯಲೇಬೇಕು ಎಂಬುದನ್ನು ನೀವು ನಿರ್ಧರಿಸಿದ ನಂತರ, ಇದನ್ನು ನಿಮ್ಮ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವ  ಅಗತ್ಯವಿದೆ. ಅವರಿಗೆ ನೀವು ಹೇಳುವ ಕಾರ್ಯಗಳಿಂದ ಏನನ್ನು ಕಲಿಯಬೇಕೆಂಬ ಅಪೇಕ್ಷೆಯಿದೆ ಎಂಬುದನ್ನು ಎಚ್ಚರಿಕೆಯಿಂದ ಪ್ರತ್ಯೇಕಿಸಿ.ನಿಮಗೆ ಜಿನವಾಗಿಯೂ ಅರ್ಥಮಾಡಿಕೊಂಡಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ಅವಕಾಶ ನೀಡುವಂತಹ ಮುಕ್ತ ಪ್ರಶ್ನೆಯನ್ನು ಕೇಳಿರಿ.




ವಿದ್ಯಾರ್ಥಿಗಳು ವಿವರಿಸುವ ಮುನ್ನ ಅವರಿಗೆ ಯೋಚಿಸಲು ಕೆಲವು ಸೆಕೆಂಡುಗಳ ಕಾಲಾವಕಾಶವನ್ನು ನೀಡಿರಿ.ಅಥವಾ ವಿದ್ಯಾರ್ಥಿಗಳಿಗೆ ಮೊದಲು ಅವರ ಉತ್ತರಗಳನ್ನು ಸಣ್ಣಗುಂಪುಗಳಲ್ಲಿ ಚರ್ಚಿಸಲು ಹೇಳಿ.ಅವರ ಉತ್ತರದಿಂದ ನಿಮಗೆ ಅವರು ಕಲಿತ್ತಾರೆಯೇ ಇಲ್ಲವೇ ಎಂಬುದನ್ನು ಹಾಗೂ ಏನನ್ನು ಕಲಿಯಬೇಕು ಎಂಬುದನ್ನು ತಿಳಿಯುವುದು.

## ಮುನ್ನ /ಮೊದಲು: ಕಲಿಕೆಯಲ್ಲಿ ವಿದ್ಯಾರ್ಥಿಗಳು ಎಲ್ಲಿದ್ದಾರೆಂಬುದನ್ನು ತಿಳಿಯುವುದು.

ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ಉತ್ತಮಪಡಿಸಲು ಸಹಾಯ ಮಾಡಬೇಕೆಂದರೆ, ನೀವು ಮತ್ತು ವಿದ್ಯಾರ್ಥಿಗಳಿಬ್ಬರೂ ವಿದ್ಯಾರ್ಥಿಗಳ ಜ್ಞಾನ ಮತ್ತುಗ್ರಹಿಕೆಯ ವಾಸ್ತವಿಕತೆ ಏನು ಎಂಬುದರ ಬಗ್ಗೆ ಅರಿತಿರುವ ಅಗತ್ಯವಿದೆ. ಒಮ್ಮೆ ನೀವು ಅಪೇಕ್ಷಿತ ಫಲಿತಾಂಶ ಅಥವಾ ಗುರಿಯ ಬಗ್ಗೆ ಹಂಚಿಕೊಂಡ ನಂತರ, ಈ ಮುಂದೆ ವಿವರಿಸಿದ ಹಾಗೆ ಮಾಡಬಹುದು-

- ವಿದ್ಯಾರ್ಥಿಗಳಿಗೆಮತ್ತೊಬ್ಬ ವಿದ್ಯಾರ್ಥಿಯೊಂದಿಗೆ ಜೊತೆಯಲ್ಲಿ ಬೋಧಿಸಲು ಹೋಗುತ್ತಿರುವ ವಿಷಯದ ಬಗ್ಗೆ ಅವರಿಗೆ ತಿಳಿದಿರುವ ಅಂಶಗಳನ್ನು ಮೈಂಡ್ ಮ್ಯಾಪ್ /ಪಟ್ಟಿ ಮಾಡಲು ಹೇಳಿ. ಸಾಕಷ್ಟು ಸಮಯವನ್ನು ನೀಡಿ, ಆದರೆ ಕೆಲವು ಅಂಶಗಳು ಮಾತ್ರ ತಿಳಿದಿರುವವರಿಗೆ ಅತಿ ಹೆಚ್ಚು ಸಮಯವನ್ನು ನೀಡಬೇಡಿ. ಆನಂತರ ನೀವು ಆ ಪಟ್ಟಿಯನ್ನು ಪರಿಶೀಲಿಸಿ.
- ಮುಖ್ಯವಾದ ಪದಗಳನ್ನು ಬೋರ್ಡ್ ಮೇಲೆ ಬರೆದು, ವಿದ್ಯಾರ್ಥಿಗಳಿಗೆ ಪ್ರತೀಪದಗಳ ಬಗ್ಗೆ ಅವರು ತಿಳಿದಿರುವ ಅಂಶಗಳನ್ನು ಯಾರಾದರೂ ಹೇಳಲು ಕೇಳಿ. ಹೇಳಿದ ನಂತರ, ಉಳಿದ ವಿದ್ಯಾರ್ಥಿಗಳಿಗೆ /ತರಗತಿಗೆ ಆ ಅಂಶಗಳು ಅರ್ಥವಾಗಿದೆಯೆಂದರೆ ಹೆಬ್ಬೆರಳನ್ನು ಮೇಲೆ ಮಾಡಲು ಹೇಳಿ👍ಮಾಡಲು ಹೇಳಿ, ಸ್ವಲ್ಪವೇ ಸ್ವಲ್ಪ ಅರ್ಥವಾಗಿದೆ ಅಥವಾ ಏನೂ ಅರ್ಥವಾಗಿಲ್ಲ ಎಂದರೆ 👎 ಹೆಬ್ಬೆರಳನ್ನು ಕೆಳಗೆ ಮಾಡಿ ತೋರಿಸಲು ಹೇಳಿರಿ, ಸ್ವಲ್ಪ ಅರ್ಥವಾಗಿದೆ ಎಂದರೆ ಹೆಬ್ಬೆರಳನ್ನು ಅಡ್ಡಲಾಗಿ ತೋರಿಸಲು ಹೇಳಿ.

  ನಿಮಗೆ ಎಲ್ಲಿಂದ ಪ್ರಾರಂಭಿದಬೇಕು ಎಂದು ತಿಳಿಯಿತೆಂದರೆ, ನಿಮ್ಮ ವಿದ್ಯಾರ್ಥಿಗಳಿಗೆ ಸಮರ್ಪಕ ಮತ್ತು ರಚನಾತ್ಮಕ ಪಾಠಗಳನ್ನು ಯೋಜಿಸಬಹುದೆಂದು ಅರ್ಥ. ಇದರೊಂದಿಗೆ ನಿಮ್ಮ ವಿದ್ಯಾರ್ಥಿಗಳು ತಾವು ಎಷ್ಟು ಚೆನ್ನಾಗಿ ಕಲಿಯುತ್ತಿದ್ದೇವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅತೀ ಮುಖ್ಯವಾದುದು. ವಿದ್ಯಾರ್ಥಿಗಳಿಗೆ ಕಲಿಕೆಯ ಜವಾಬ್ದಾರಿಯನ್ನು ಹೊಣೆಯನ್ನು ತಾವೇ ಹೊತ್ತುಕೊಳ್ಳಲು ಕಲಿಸಿದಾಗ ಅವರನ್ನು ಜೀವನ ಪರ್ಯಂತ ಕಲಿಕಾರ್ಥಿಗಳನ್ನಾಗಿಸಲು ಸಹಾಯಕ.

## ಸಮಯದಲ್ಲಿ During: ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಖಾತರಿಪಡಿಸಿಕೊಳ್ಳುವುದು.

ನೀವು ವಿದ್ಯಾರ್ಥಿಗಳೊಂದಿಗೆ ಅವರ ಪ್ರಸ್ತುತ ಪ್ರಗತಿಯ ಬಗೆಗ ಮಾತನಾಡುವಾಗ, ಅವರು ನಿಮ್ಮ ಹಿಮ್ಮಾಹಿತಿಯು ಉಪಯುಕ್ತ ಮತ್ತು ರಚನಾತ್ಮಕ ಎಂದು ಕಂಡುಕೊಂಡಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಿರಿ. ಇದನ್ನು ಹೀಗೆ ಮಾಡಬಹುದು:-

- ವಿದ್ಯಾರ್ಥಿಗಳಿಗೆ ಅವರ ಬಲಗಳನ್ನು ಮತ್ತು ಮುಂದೆ ಮತ್ತಷ್ಟು ಹೇಗೆ ಸುಧಾರಿಸಬಹುದು ಎಂಬುದನ್ನು ತಿಳಿಯಲು ಸಹಕರಿಸಿರಿ.
- ಯಾವುದನ್ನು ಹೆಚ್ಚು ಬೆಳೆಸಿಕೊಳ್ಳುವ /ಯಾವುದನ್ನು ಅಭಿವೃದ್ಧಿಪಡಿಸಿಕೊಳ್ಳುವ ಅಗತ್ಯವಿದೆ ಎಂಬ ಬಗ್ಗೆ ಸ್ಪಷ್ಟತೆಯನ್ನು ಹೊಂದಿರಬೇಕು.
- ಅವರ ಕಲಿಕೆಯನ್ನು ಹೇಗೆ ಅಭಿವೃದ್ಧಿಪಡಿಸಿಕೊಳ್ಳುತ್ತಾರೆಂಬುದರ ಬಗ್ಗೆ ಸಕಾರಾತ್ಮಕ /ಧನಾತ್ಮಕವಾಗಿರುವುದು. ನೀಡಿದ ಸಲಹೆಯನ್ನು ಅರ್ಥಮಾಡಿಕೊಂಡಿದ್ದಾರೆಯೇ ಮತ್ತು ಬಳಸಬಲ್ಲರೇ ಎಂಬುದನ್ನು ಪರೀಕ್ಷಿಸುವುದು.

ವಿದ್ಯಾರ್ಥಿಗಳಿಗೆ ಅವರ ಕಲಿಕೆಯು ಪ್ರಗತಿ ಹೊಂದಲು ಅವಕಾಶಗಳನ್ನು ಪೂರೈಸುವ ಅಗತ್ಯವಿದೆ. ಅಂದರೆ ಪ್ರಸ್ತುತ ನಿಮ್ಮ ವಿದ್ಯಾರ್ಥಿಗಳು ಕಲಿಕೆಯಲ್ಲಿ ಎಲ್ಲಿದ್ದಾರೆ ಹಾಗೂ ನೀವು ಅವರನ್ನು ಎಲ್ಲೊಯ್ಯಲು ಬಯಸಿರುವಿರೋ ಅವುಗಳ ಮಧ್ಯದ ಅಂತರವನ್ನು ತೊಡೆದು ಹಾಕಲು ಸಹಾಯಕವಾಗುವಂತೆ ನಿಮ್ಮ ಪಾಠ ಯೋಜನೆಯನ್ನು ಮಾರ್ಪಡಿಸಿಕೊಳ್ಳಬೇಕಾಗಬಹುದು. ಇದನ್ನು ಮಾಡಲು ನೀವು-

- ನಿಮ್ಮ ವಿದ್ಯಾರ್ಥಿಗಳಿಗೆ ಈಗಾಗಲೇ ತಿಳಿದಿದೆ ಎಂದು ಅನಿಸಿದ ಕಾರ್ಯದ ಬಗ್ಗೆ ಹಿಂದಿರುಗಿ ನೋಡಿ.
- ವಿದ್ಯಾರ್ಥಿಗಳ ಅಗತ್ಯದ ಮೇರೆಗೆ ತಂಡಗಳಾಗಿ ವಿಂಗಡಿಸಿ, ಮತ್ತು ವಿಭಿನ್ನ ಕಾರ್ಯ/ಚಟುವಟಿಕೆಗಳನ್ನು ನೀಡಿ.
- ತಾವು ಯಾವೆಲ್ಲಾ ಸಂಪನ್ಮೂಲಗಳನ್ನು ಓದಬೇಕೆಂದನ್ನು ಅವರನ್ನು ನಿರ್ಧರಿಸಲು ಬಿಡಿ, ಇದರಿಂದ ಅವರು "ತಮ್ಮ ಕಲಿಕೆಯ ಅಂತರವನ್ನು ತಾವೇ ಪೂರ್ಣಗೊಳಿಸಕೊಳ್ಳಬಹುದು".
- "Low entry high ceiling" ಕಾರ್ಯವನ್ನು ಬಳಸಿ ಇದರಿಂದ ಎಲ್ಲಾ ವಿದ್ಯಾರ್ಥಿಗಳು ಪ್ರಗತಿಯನ್ನು ಹೊಂದಬಹುದು-ಇದನ್ನು ಎಲ್ಲಾ ವಿದ್ಯಾರ್ಥಿಗಳು ಕಾರ್ಯ ಮಾಡುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಹೆಚ್ಚು ಮಾಡುವ ಸಾಮರ್ಥ್ಯವುಳ್ಳವರಿಗೂ ಯಾವುದೇ ನಿರ್ಬಂಧವಿಲ್ಲ ಮತ್ತು ತಮ್ಮ ಕಲಿಕೆಯನ್ನು ವಿಸ್ತರಿಸುತ್ತಾ ಪ್ರಗತಿಯನ್ನು ಕಾಣಬಹುದು.

ನಿಮ್ಮ ಪಾಠದ ವೇಗವನ್ನು ಆಗಾಗ್ಗೆ ಕಡಿಮೆಗೊಳಿಸುವುದರಿಂದ ಕಲಿಕೆಯ ವೇಗವನ್ನು ವಾಸ್ತವವಾಗಿ ಹೆಚ್ಚಿಸಬಹುದು, ಏಕೆಂದರೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಮಯವನ್ನು ನೀಡುವಿರಿ ಮತ್ತು ಕಲಿಕೆಯಲ್ಲಿ ಸುಧಾರಿಸಿಕೊಳ್ಳಲು ಅವರೇನು ಮಾಡಬೇಕೆಂಬುದನ್ನು ಯೋಚಿಸುವ ಹಾಗೂ ಅರ್ಥಮಾಡಿಕೊಳ್ಳುವ ಾತ್ಮವಿಶ್ವಾಸವನ್ನು ಹೊಂದುವರು. ವಿದ್ಯಾರ್ಥಿಗಳಿಗೆ ಅವರು ಮಾಡುತ್ತಿರುವ ಕಾರ್ಯದ /ಚಟುವಟಿಕೆಯ ಬಗ್ಗೆ ಅವರಲ್ಲಿಯೇ ಮಾತನಾಡಿಕೊಳ್ಳಲು, ಕಲಿಕೆಯ ಅಂತರವು ಎಲ್ಲಿದೆ ಮತ್ತು ಅವುಗಳನ್ನು ಹೇಗೆ ಪೂರ್ತಿಮಾಡುವುದು ಎಂಬ ಬಗ್ಗೆ ಚಿಂತನೆ ಮಾಡುವಂತೆ ಮಾಡುವ ಮೂಲಕ ಅವರ ಮೌಲ್ಯಮಾಪನವನ್ನು ಪರೀಕ್ಷಿಸಿಕೊಳ್ಳುವ ಅವಕಾಶಕ್ಕೆ ಅನುವು ಮಾಡಿಕೊಟ್ಟಂತಾಗುವುದು.

## ನಂತರ: ಸಾಕ್ಷಾಧಾರಗಳನ್ನು ಸಂಗ್ರಹಿಸಿ, ವ್ಯಾಖ್ಯಾನಿಸಿ, ಮುಂದಿನ ಹಂತವನ್ನು ಯೋಜಿಸುವಿಕೆ.

ಬೋಧನೆ-ಕಲಿಕೆ ಪ್ರಕ್ರಿಯೆ ನಡೆಯುವಾಗ ಹಾಗೂ ತರಗತಿ ಕೆಲಸ ಅಥವಾ ಮನೆಗೆಲಸವನ್ನು ನೀಡಿಸ ನಂತರ ಈ ಕೆಳಗಿನ ಅಂಶಗಳನ್ನು ಗಮನವಹಿಸುವುದು ಬಹಳ ಮುಖ್ಯ, ಅವುಗಳೆಂದರೆ-

- ಎಷ್ಟು ಉತ್ತಮವಾಗಿ ನಿಮ್ಮ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಎಂಬುದನ್ನು ಪತ್ತೆಹಚ್ಚಿರಿ.
- ಇದನ್ನು ಮುಂದಿನ ಪಾಠವನ್ನು ಯೋಜಿಸುವಲ್ಲಿ ಬಳಸಿಕೊಳ್ಳಿ.
- ವಿದ್ಯಾರ್ಥಿಗಳಿಗೆ ಈ ಬಗ್ಗೆ ಹಿಂತಿರುಗಿ ಮಾಹಿತಿಯನ್ನು ನೀಡಿರಿ.

ಮೌಲ್ಯಮಾಪನದ 4 ಮುಖ್ಯ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:-

### ಮಾಹಿತಿಯನ್ನು ಅಥವಾ ಸಾಕ್ಷಿಗಳನ್ನು ಸಂಗ್ರಹಿಸುವುದು

ಪ್ರತಿಯೊಬ್ಬ ವಿದ್ಯಾರ್ಥಿಯು ಶಾಲೆಯ ಒಳಗೆ ಮತ್ತು ಹೊರಗೆ ತಮ್ಮದೇ ಆದ ವೇಗ ಮತ್ತು ಶೈಲಿಯಲ್ಲಿ ವಿಭಿನ್ನವಾಗಿ ಕಲಿಯುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳನ್ನು ಮೌಲ್ಯಮಾಪನ ಮಾಡುವಾಗ ಈ ಕೆಳಗಿನ ಎರಡು ಅಂಶಗಳನ್ನು ಮಾಡುವ ಅಗತ್ಯವಿದೆ:-

- ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ-ನಿಮ್ಮ ಸ್ವಅನುಭವದಿಂದ, ವಿದ್ಯಾರ್ಥಿಯಿಂದ, ವಿದ್ಯಾರ್ಥಿಯಿಂದ, ಇತರ ವಿದ್ಯಾರ್ಥಿಗಳಿಂದ, ಇತರ ಶಿಕ್ಷಕರಿಂದ, ಪೋಷಕರಿಂದ ಮತ್ತು ಸಮುದಾಯದ ಸದಸ್ಯರಿಂದ.
- ವಿದ್ಯಾರ್ಥಿಗಳನ್ನು ವೈಯಕ್ತಿವಾಗಿ, ಇತರರ ಜೊತೆಯಲ್ಲಿರುವಾಗ ಮತ್ತು ಗುಂಪಿನಲ್ಲಿ ಮೌಲ್ಯಮಾಪನ ಮಾಡಿ ಮತ್ತು ಸ್ವಮೌಲ್ಯಮಾಪನವನ್ನು ಉತ್ತೇಜಿಸಿ. ಯಾವುದೇ ಒಂದು ವಿಧಾನವು ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲದಿರುವುದರಿಂದ, ವಿವಿಧ ವಿಧಾನಗಳನ್ನು ಬಳಸುವುದು ಬಹುಮುಖ್ಯ. ವಿದ್ಯಾರ್ಥಿಯ ಕಲಿಕೆ ಮತ್ತು ಪ್ರಗತಿಯ ಬಗ್ಗೆ ಮಾಹಿತಿ ಸಂಗ್ರಹಿಸುವ ವಿವಿಧ ವಿಧಾನಗಳು, ಅವಲೋಕನ, ಆಲಿಸುವಿಕೆ, ವಿಷಯ ಮತ್ತು ತತ್ವಗಳ (theme) ಬಗ್ಗೆ ಚರ್ಚೆ, ಲಿಖಿತ ತರಗತಿ, ಮತ್ತು ಮನೆಗೆಲಸಗಳನ್ನು ಪರಿಶೀಲಿಸುವಿಕೆಯನ್ನು ಒಳಗೊಂಡಿದೆ.

## ದಾಖಲಿಸುವುದು

ಭಾರತದಾದ್ಯಂತ ಶಾಲೆಗಳನ್ನು ದಾಖಲೀಕರಣ ಮಾಡಲು ಅನುಸರಿಸುವಂತಹ ಒಂದು ವಿಧಾನ/ರೂಪವೆಂದರೆ ಅಂಕಪಟ್ಟಿಯನ್ನು ಬಳಸುವುದು. ಆದರೆ ಇದು ವಿದ್ಯಾರ್ಥಿಗಳ ಕಲಿಕೆ ಅಥವಾ ವರ್ತನೆಯ ಎಲ್ಲ ಅಂಶಗಳನ್ನು ದಾಖಲಿಸಲು ಅನುವು ಮಾಡಿಕೊಡುವುದಿಲ್ಲ. ನೀವು ಇವುಗಳನ್ನು ಮಾಡಲು ಅನುಸರಿಸಲು ಇಚ್ಛಿಸಬಹುದಾದ ಕೆಲವು ಅಂಶಗಳು ಇಂತಿವೆ-

- ಬೋಧನಾ-ಕಲಿಕಾ ಪ್ರಕ್ರಿಯೆಯು ನಡೆಯುವ ಸಂಧರ್ಭದಲ್ಲಿ ನಿಮ್ಮ ಅವಲೋಕನದ ಅಂಶಗಳನ್ನು ಡೈರಿ/ರಿಜಿಸ್ಟರ್ ನಲ್ಲಿ ಬರೆದಿಡುವುದು.
- ಪೋರ್ಟ್ ಪೋಲಿಯೊದಲ್ಲಿ ವಿದ್ಯಾರ್ಥಿಗಳ ಚಟುವಟಿಕೆಯ /ಕಾರ್ಯದ ಮಾದರಿಗಳನ್ನು ಇಡುವುದು. (ಲಿಖಿತ, ಕಲೆ, ಪ್ರೊಫೈಲ್, ಕವನಗಳು, ಇತ್ಯಾದಿ).
- ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರೊಫೈಲ್ ಸಿದ್ಧಪಡಿಸುವುದು.
- ವಿದ್ಯಾರ್ಥಿಗಳ ವಿಭಿನ್ನ / ಸಾಮಾನ್ಯವಲ್ಲದ ಘಟನೆಗಳನ್ನು, ಬದಲಾವಣೆಗಳು, ಸಮಸ್ಯೆಗಳು, ಬಲ ಮತ್ತು ಕಲಿಕೆಯ ಸಾಕ್ಷಾರ್ಥಗಳನ್ನು ಬರೆದಿಡುವುದು.

## ಸಾಕ್ಷಾಧಾರಗಳನ್ನು ವ್ಯಾಖ್ಯಾನಿಸುವುದು

ಒಮ್ಮೆ ಮಾಹಿತಿ ಮತ್ತು ಸಾಕ್ಷಾಧಾರಗಳನ್ನು ಕಲೆಹಾಕಿ, ದಾಖಲೆ ಮಾಡಲ್ಪಟ್ಟ ನಂತರ, ಪ್ರತಿಯೊಬ್ಬ ವಿದ್ಯಾರ್ಥಿಯು ಹೇಗೆ ಕಲಿಯುತ್ತಿದ್ದಾರೆ ಮತ್ತು ಪ್ರಗತಿ ಹೊಂದುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಲೆಹಾಕಿದ ಅಂಶಗಳನ್ನು ವ್ಯಾಖ್ಯಾನ ಮಾಡುವುದು ಬಹಳ ಮುಖ್ಯವಾಗಿದೆ. ಇದಕ್ಕೆ ಜಾಗರೂಕತೆಯಿಂದ ಚಿಂತನೆ ಮತ್ತು ವಿಶ್ಲೇಷಣೆ ಮಾಡುವ ಅಗತ್ಯವಿದೆ.ನಂತರ ವಿಶ್ಲೇಷಣೆಯಿಂದ ಕಂಡುಬಂದಂತಹ ಅಂಶಗಳನ್ನು ಕಲಿಕೆಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ. ಈ ಕಾರ್ಯವನ್ನು ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡುವುದು ಅಥವಾ ಹೊಸ ಸಂಪನ್ಮೂಲಗಳನ್ನು ಪತ್ತೆಹಚ್ಚುವುದು, ಗುಂಪು/ತಂಡವನ್ನು ಪುನರ್ರಚಿಸುವುದು ಅಥವಾ ಪಾಠದ ಅಂಶಗಳನ್ನು ಪುನರಾವರ್ತಿಸುವ ಮೂಲಕ ಮಾಡಬಹುದು.

### ಸುಧಾರಣೆಗಾಗಿ ಯೋಜನೆ

ಪ್ರತಿಯೊಬ್ಬ ವಿದ್ಯಾರ್ಥಿಗೂ ನಿರ್ದಿಷ್ಟ ಮತ್ತು ವಿಭಿನ್ನೀಕರಿಸಿದ ಕಲಿಕಾ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ, ಸಹಾಯ ಬೇಕಾದ ಪ್ರತಿಯೊಬ್ಬ ವಿದ್ಯಾರ್ಥಿಗೂ ಗಮನ ನೀಡುವ ಮೂಲಕ ಮತ್ತು ಹೆಚ್ಚು ಸಾಮರ್ಥ್ಯವನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಸವಾಲುಗಳನ್ನು ನೀಡುವ ಮೂಲಕ ಅರ್ಥಯುತ ಕಲಿಕಾ ಅವಕಾಶಗಳನ್ನು ಪೂರೈಸುವುದಕ್ಕೆ/ನೀಡುವುದಕ್ಕೆ ಮೌಲ್ಯಮಾಪನವು ನಿಮಗೆ ಸಹಾಯಕವಾಗಿದೆ.

## ಸಂಪನ್ಮೂಲ-2: ಮೇಲ್ವಿಚಾರಣೆ ಮತ್ತು ಹಿಮ್ಮಾಹಿತಿ ನೀಡುವಿಕೆ

ವಿದ್ಯಾರ್ಥಿಯ ಕಲಿಕೆ/ಪ್ರದರ್ಶನದಲ್ಲಿನ ಸುಧಾರಣೆಯು ನಿರಂತರ ನಿಗಾವಣೆ/ಮೇಲ್ವಿಚಾರಣೆ ಹಾಗೂ ಪ್ರತಿಕ್ರಿಯಿಸುವುದನ್ನು ಒಳಗೊಂಡಿದೆ.ಇದರಿಂದ ವಿದ್ಯಾರ್ಥಿಯು ಅವನಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎಂಬುದನ್ನು ತಿಳಿಯಲು ಹಾಗೂ ಅವರಿಗೆ ನೀಡಿರುವ ಕಾರ್ಯವನ್ನು ಪೂರ್ಣಗೊಳಿಸಿದ ನಂತರ ಹಿಮ್ಮಾಹಿತಿಯನ್ನು ಪಡೆಯಬಹುದು.ನಿಮ್ಮ ರಚನಾತ್ಮಕ ಹಿಮ್ಮಾಹಿತಿಯಿಂದ ಅವರು ತಮ್ಮ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಬಹುದು.

### ನಿಗಾವಣೆ/ಮೇಲ್ವಿಚಾರಣೆ

ಪರಿಣಾಮಕಾರಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಹೆಚ್ಚು ನಿಗಾ ವಹಿಸುವರು. ಸಾಮಾನ್ಯವಾಗಿ ಹೆಚ್ಚಿನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಕಾರ್ಯವನ್ನು ಕೇಳುವುದರ ಮೂಲಕ ಹಾಗೂ ತರಗತಿಯಲ್ಲಿ ವಿದ್ಯಾರ್ಥಿಗಳು ಏನು ಮಾಡುತ್ತಿದ್ದಾರೆ ಎಂಬುದನ್ನು ಅವಲೋಕಿಸುವುದರ ಮೂಲಕ ಮೇಲ್ವಿಚಾರಣೆ/ನಿಗಾವಣೆ ಮಾಡುತ್ತಾರೆ. ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯ ಮೇಲ್ವಿಚಾರಣೆ ಮಾಡುವುದು ಅತೀಮುಖ್ಯ ಏಕೆಂದರೆ ಇದು ಈ ಕೆಳಗಿನ ಅಂಶಗಳನ್ನು ಸಾಧಿಸಲು ಸಹಾಯಕವಾಗಿದೆ. ಅವುಗಳೆಂದರೆ-

- ಹೆಚ್ಚಿನ ಶ್ರೇಣಿಯನ್ನು ಸಾಧಿಸಬಹುದು.
- ವಿದ್ಯಾರ್ಥಿಗಳ ಪ್ರದರ್ಶನ/ಕಲಿಕೆಯ ಬಗ್ಗೆ ಹೆಚ್ಚಿನ ಅರಿವು ಮೂಡುವುದು, ಹಾಗೂ ಅವರ ಕಲಿಕೆಗೆ ಜವಾಬ್ದಾರರಾಗಬಹುದು.
- ಅವರ ಕಲಿಕೆಯನ್ನು ಉತ್ತಮಪಡಿಸಬಹುದು.
- ರಾಜ್ಯ ಮತ್ತು ಸ್ಥಳೀಯ ಮಟ್ಟದ ನಿಗದಿತ ಪರೀಕ್ಷೆಗಳಲ್ಲಿ ಸಾಧನೆಯನ್ನು ಊಹಿಸಬಹುದು/ನಿರ್ಧರಿಸಬಹುದು.

ಇದರೊಂದಿಗೆ ಶಿಕ್ಷಕರಾಗಿ ನೀವು ಈ ಕೆಳಗಿನ ವಿಷಯಗಳನ್ನು ನಿರ್ಧರಿಸಲೂ ಸಹ ಸಹಾಯಕವಾಗಿದೆ.

- ವಿದ್ಯಾರ್ಥಿಗಳಿಗೆ ಅವರ ಪ್ರಗತಿಯ ಬಗ್ಗೆ ಸ್ಪಷ್ಟ ಮತ್ತು ಪ್ರಾಮಾಣಿಕ ಹಿಮ್ಮಾಹಿತಿ ನೀಡಿದಾಗ ಅವರು ಹೆಚ್ಚು ಉತ್ತಮಪಡಿಸಿಕೊಳ್ಳುವರು.
- ಮೇಲ್ವಿಚಾರಣೆಯಲ್ಲಿ ತೊಡಗುವುದರಿಂದ ನೀವು ನಿರಂತರವಾಗಿ ಹಿಮ್ಮಾಹಿತಿ ನೀಡುವುದು,
- ನಿಮ್ಮ ವಿದ್ಯಾರ್ಥಿಗಳಿಗೆ ಅವರು ಹೇಗೆ ಕಲಿಯುತ್ತಿದ್ದಾರೆ ಹಾಗೂ ಕಲಿಕೆಯನ್ನು ಉನ್ನತೀಕರಿಸಲು ಇನ್ನೂ ಏನು ಮಾಡುವ ಅಗತ್ಯವಿದೆ ಎಂಬುದನ್ನು ತಿಳಿಸುವಂತೆ ನಿಮ್ಮನ್ನು ಶಕ್ತರನ್ನಾಗಿಸುತ್ತದೆ.
- ವಿದ್ಯಾರ್ಥಿಗಳಿಗೆ ಅವರ ಕಲಿಕೆಯ ಗುರಿಯನ್ನು ತಾವೇ ನಿರ್ಧರಿಸಿಕೊಳ್ಳುವಂತೆ ಮಾಡುವುದು ನಿಮಗೆ ಒಂದು ದೊಡ್ಡ ಸವಾಲಾಗಿದೆ.
- ಈ ವಿಧಾನವನ್ನು ಸ್ವ-ನಿಗಾವಣೆ/ ಮೇಲ್ವಿಚಾರಣೆ ಎಂತಲೂ ಕರೆಯುವರು.

ವಿದ್ಯಾರ್ಥಿಗಳು ಅದರಲ್ಲೂ ವಿಶೇಷವಾಗಿ ಕಲಿಯುವಂತೆ ಕಷ್ಟಪಡುವವರು ತಮ್ಮ ಕಲಿಕೆಯ ಒಡೆತನ/ಜವಾಬ್ದಾರಿಯನ್ನು ತೆಗೆದುಕೊಳ್ಳುವ ಅಭ್ಯಾಸವಿರುವವರಲ್ಲಿ. ಆದರೆ ಯಾವುದೇ ವಿದ್ಯಾರ್ಥಿಗಳಿಗಾದರೂ ಸಹ ಅವರು ಒಂದು ಯೋಜನೆಗೆ ತಮ್ಮ ಗುರಿ ಅಥವಾ ಉದ್ದೇಶವನ್ನು ನಿರ್ಧರಿಸಲು,

ಅವರ ಚಟುವಟಿಕೆಯನ್ನು ಯೋಜಿಸಲು ಮತ್ತು ನಿರ್ದಿಷ್ಟ ಸಮಯವನ್ನು ಗೊತ್ತುಮಾಡಲು ಮತ್ತು ಅವರ ಪ್ರಗತಿಯನ್ನು ತಾವೇ ನಿಗಾವಣೆ ಮಾಡುವುದನ್ನು ಕಲಿಯಲು ಸಹಾಯ ಮಾಡಬಹುದು. ಸ್ವ-ನಿಗಾವಣೆಯು ಕೌಶಲ್ಯವನ್ನುಸಾಧಿಸುವ ಪ್ರಕ್ರಿಯೆಯಅಭ್ಯಾಸವು ಅವರು ಶಾಲಾಜೀವನವನ್ನು ಮತ್ತು ಅವರ ಜೀವನವನ್ನು ಉತ್ತಮವಾಗಿಸಲು ಸಹಾಯಕ.

**ವಿದ್ಯಾರ್ಥಿಗಳನ್ನು ಅವಲೋಕಿಸುವುದು ಮತ್ತು ಆಲಿಸುವುದು:**

ಹೆಚ್ಚಿನ ಸಮಯದಲ್ಲಿ ಶಿಕ್ಷಕರು ಸ್ವಾಭಾವಿಕವಾಗಿ ವಿದ್ಯಾರ್ಥಿಗಳನ್ನು ಅವಲೋಕಿಸುತ್ತಾರೆ ಮತ್ತು ಆಲಿಸುತ್ತಾರೆ. ಇದೊಂದು ಸರಳ ನಿಗಾವಣೆ ಸಾಧನವಾಗಿದೆ. ಉದಾಹರಣೆಗೆ ನೀವು-

- ವಿದ್ಯಾರ್ಥಿಗಳು ಜೋರಾಗಿ ಓದುವುದನ್ನು ಕೇಳಬಹುದು.
- ಸಹ/ಜೊತೆಯಲ್ಲಿ ಅಥವಾ ಗುಂಪು ಚಟುವಟಿಕೆಗಳಲ್ಲಿ ಚರ್ಚೆಮಾಡುವುದನ್ನು ಕೇಳಬಹುದು.
- ವಿದ್ಯಾರ್ಥಿಗಳು ತರಗತಿಯಲ್ಲಿ ಹಾಗೂ ಹೊರಾಂಗಣದಲ್ಲಿ ಸಂಪನ್ಮೂಲಗಳನ್ನು ಬಳಸುವುದನ್ನು ಅವಲೋಕಿಸುವುದು.
- ಅವರು ಗುಂಪಿನಲ್ಲಿ ಕಾರ್ಯನಿರ್ವಹಿಸುವಾಗ ಅವರ ದೈಹಿಕ ಭಂಗಿಗಳನ್ನು ಅವಲೋಕಿಸುವುದು.

ನೀವು ಸಂಗ್ರಹಿಸುವ ಅವಲೋಕನದ ಅಂಶಗಳು ಅವರ ಕಲಿಕೆಯ ಪ್ರಗತಿಯ ನಿಜಸಾಕ್ಷಾಧಾರಗಳಾಗಿರುವುದನ್ನು ಖಾತರಿಪಡಿಸಿಕೊಳ್ಳಿ.ನೀವು ನೋಡಬಹುದಾದ ಕೇಳಿದ, ದಾಖಲೆಗಳನ್ನು, ಅಂಶಗಳನ್ನು ಮಾತ್ರ ಸಮರ್ಥಿಸಿ/ರುಜುವಾತುಪಡಿಸಿ.

ತರಗತಿಯಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿರುವಾಗ ನೀವು ಇದರಿಂದ ಅವಲೋಕನದ ಅಂಶವನ್ನು ಸಂಕ್ಷಿಪ್ತ ನೋಟ್ ಮಾಡಿಕೊಳ್ಳಲು ಸಹಾಯಕ.ಈ ಸಮಯದಲ್ಲಿ ವಿದ್ಯಾರ್ಥಿಗಳ ಪಟ್ಟಿಯನ್ನು ಜೊತೆಯಲ್ಲಿರಿಸಿಕೊಳ್ಳುವುದು ಉತ್ತಮ, ಇದರಿಂದ ನೀವು ಯಾವ ವಿದ್ಯಾರ್ಥಿಗೆ ಹೆಚ್ಚು ಸಹಾಯ ಬೇಕು.ಹಾಗೂ ಎಲ್ಲಿಯಾದರೂ ಭಿನ್ನಾಭಿಪ್ರಾಯ, ತಪ್ಪುಅಭಿಪ್ರಾಯ ಮೂಡುತ್ತಿದೆಯೇ ಎಂಬುದನ್ನು ಗ್ರಹಿಸಲು ಕೂಡ ಸಹಾಯಕ. ಈ ಅವಲೋಕನದ ಟಿಪ್ಪಣಿಗಳನ್ನು ಪ್ರತೀ/ಪ್ರತ್ಯೇಕ ವಿದ್ಯಾರ್ಥಿಗೆ ಮತ್ತು ಗುಂಪಿಗೆ ಹಿಮ್ಮಾಹಿತಿಯನ್ನು ನೀಡಲು ಅಥವಾ ಉತ್ತೇಜಿಸಲು ಬಳಸಿಕೊಳ್ಳಬಹುದಾಗಿದೆ.

**ಹಿಮ್ಮಾಹಿತಿಯನ್ನು ನೀಡುವುದು:**

ಹಿಮ್ಮಾಹಿತಿ ಎಂದರೆ ಒಂದು ನಿರ್ದಿಷ್ಟ, ನಿಗಧಿತ ಗುರಿ ಅಥವಾ ಅಪೇಕ್ಷಿತ ಫಲಿತಾಂಶಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಹೇಗೆ ಪ್ರದರ್ಶನ (perform) ಮಾಡಿದ್ದಾರೆ ಎಂಬುದನ್ನು ನೀಡುವ ಮಾಹಿತಿಯಾಗಿದೆ.

- ಪರಿಣಾಮಕಾರಿ ಹಿಮ್ಮಾಹಿತಿಯು ವಿದ್ಯಾರ್ಥಿಗೆ-ಏನು ಆಯಿತೆಂಬುದರ ಬಗ್ಗೆ ಮಾಹಿತಿಯನ್ನು ನೀಡುವುದು.
- ನೀಡಿದ ಕಾರ್ಯ ಅಥವಾ ಕೆಲಸ ಎಷ್ಟು ಚೆನ್ನಾಗಿ ಮಾಡಲ್ಪಟ್ಟಿದೆ ಎಂಬುದರ ಮೌಲ್ಯಮಾಪನ.
- ನೀಡಿದ ಕಾರ್ಯವನ್ನು ಹೇಗೆ ಮತ್ತಷ್ಟು ಸುಧಾರಿಸಬಹುದು ಎಂಬ ಮಾರ್ಗದರ್ಶನ ನೀಡುತ್ತದೆ.

ನೀವು ಪ್ರತಿ ವಿದ್ಯಾರ್ಥಿಗೆ ಹಿಮ್ಮಾಹಿತಿ ನೀಡಿದಾಗ ಅದನ್ನು ವಿದ್ಯಾರ್ಥಿಗಳಿಗೆ ಈ ಕೆಳಗಿನ ಅಂಶಗಳನ್ನು ತಿಳಿಯಲು ಸಹಾಯಕವಾಗಿರುವಂತಿರಬೇಕು ಅವುಗಳೆಂದರೆ.

- ಅವರು ವಾಸ್ತವವಾಗಿ ಏನು ಮಾಡಬಹುದು.
- ಇದುವರೆಗೆ ಅವರೇನು ಮಾಡಿಲ್ಲ/ಅವರಿಂದ ಏನು ಮಾಡಲಿಕ್ಕಾಗಿಲ್ಲ.
- ಅವರ ಕಾರ್ಯ ಇತರರ ಕಾರ್ಯದೊಂದಿಗೆ ಹೇಗೆ ಹೋಲಿಸಲ್ಪಟ್ಟಿದೆ.
- ಅವರು ಹೇಗೆ ಸುಧಾರಿಸಬಹುದು.

ಪರಿಣಾಮಕಾರಿ ಹಿಮ್ಮಾಹಿತಿಯು ವಿದ್ಯಾರ್ಥಿಗಳಿಗೆ ಸಹಾಯಕ ಎಂಬುದನ್ನು ನೆನಪಿನಲ್ಲಿಡುವುದು ಅತಿ ಅವಶ್ಯಕವಾದುದು, ನಿಮ್ಮ ಹಿಮ್ಮಾಹಿತಿಯು ಅಸ್ಪಷ್ಟತೆಯಿಂದ ಮತ್ತು ನ್ಯಾಯಯುತವಾಗಿಲ್ಲದಿದ್ದರೆ ಕಲಿಕೆಯನ್ನು ಅಂತರ್ಗತಗೊಳಿಸಲು ಸಾಧ್ಯವಿಲ್ಲ. ಪರಿಣಾಮಕಾರಿ ಹಿಮ್ಮಾಹಿತಿಯು-

- ಕೈಗೊಳ್ಳಲಾಗುವ ಕಾರ್ಯ ಹಾಗೂ ವಿದ್ಯಾರ್ಥಿಗಳು ಮಾಡಬೇಕಾದ ಕಲಿಕೆಯ ಮೇಲೆ **ಕೇಂದ್ರೀಕೃತ**ವಾಗಿರುತ್ತದೆ.
- **ಸ್ಪಷ್ಟ ಮತ್ತು ಪ್ರಾಮಾಣಿಕವಾಗಿರಬೇಕು**-ವಿದ್ಯಾರ್ಥಿಗಳಿಗೆ ಅವರ ಕಲಿಕೆಯ ಉತ್ತಮ ಅಂಶ ಮತ್ತು ಸುಧಾರಣೆಯಾಗಬೇಕಾದ ಅಂಶಗಳ ಬಗ್ಗೆಯೂ ಹೇಳಬೇಕು.
- **ಕಾರ್ಯೋನ್ಮುಖವಾಗಿರಲಿ**-ವಿದ್ಯಾರ್ಥಿಗಳು ಅವರು ಮಾಡಬಹುದಾದ ಅಂಶಗಳ ಬಗ್ಗೆ ಹೇಳುವಂತಿರಬೇಕು/ ಹೇಳಬೇಕು.
- ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬಹುದಾದ **ಸರಳ /ಸಮರ್ಪಕ ಭಾಷೆ**ಯಲ್ಲಿರಬೇಕು.
- **ಸರಿಯಾದ ಸಮಯದಲ್ಲಿ ನೀಡಬೇಕು**- ಬಹಳ ಬೇಗ ಹೇಳಿಬಿಡ್ಡರೆ ವಿದ್ಯಾರ್ಥಿ ನಾನು ಮುಂದೆ ಅದನ್ನೇ ಮಾಡುತ್ತಿದ್ದೆ ಎಂದು ಯೋಚಿಸಲಬಹುದು. ಬಹಳ ತಡವಾಗಿ ಹಿಮ್ಮಾಹಿತಿ ನೀಡಿದರೆ ಅವರು ಇತರೆ ಅಂಶಗಳ ಕಡೆ ಗಮನ ಹರಿಸಿರಬಹುದು ಮತ್ತು ಮತ್ತೆ ಹಿಂದಿರುಗಿ ನೀವು ಹೇಳಿದ ಕಾರ್ಯವನ್ನು ಮಾಡಲು ಇಚ್ಛಿಸದಿರಬಹುದು. ಆದುದರಿಂದ ಹಿಮ್ಮಾಹಿತಿಯನ್ನು ಸರಿಯಾದ ಸಮಯದಲ್ಲಿ ನೀಡಬೇಕಾದುದು ಬಹಳ ಅವಶ್ಯಕ.

ಹಿಮ್ಮಾ ಹಿತಿಯು ಮೌಖಿಕವಾಗಿರಲಿ ಅಥವಾ ಅವರ ಪುಸ್ತಕದಲ್ಲಿ ಬರವಣಿಗೆ ರೂಪದಲ್ಲಿರಲಿ ಈ ಮುಂದೆ ನೀಡಿರುವ ನಿಯಮಾವಳಿ/ಮಾರ್ಗದರ್ಶನವನ್ನು ಅನುಸರಿಸಿದಲ್ಲಿ ಹೆಚ್ಚು ಪರಿಣಾಮಕಾರಿಯಾಗುವುದು.

## ಹೊಗಳಿಕೆ ಮತ್ತು ಸಕಾರಾತ್ಮಕ ಭಾಷೆಯನ್ನು ಬಳಸುವಿಕೆ

ನಮ್ಮನ್ನು ತಿದ್ದುವುದಕ್ಕಿಂತ ಅಥವಾ ಟೀಕಿಸುವುದಕ್ಕಿಂತ ಯಾರಾದರೂ ಹೊಗಳಿದರೆ ಅಥವಾ ಉತ್ತೇಜಿಸಿದರೆ ಸಾಮಾನ್ಯವಾಗಿ ಸಂತೋಷ ಪಡುತ್ತೇವೆ.ಪುನರ್ಬಲನ ಮತ್ತು ಸಕಾರಾತ್ಮಕ ಭಾಷೆಯ ಬಳಕೆಯು ಇಡೀ ತರಗತಿಗೆ ಹಾಗೂ ಯಾವುದೇ ವಯಸ್ಸಿನ ವ್ಯಕ್ತಿಗಾಗಲೀ ಪ್ರೇರಣೆಯನ್ನು ನೀಡುವುದು.ಆದರೆ ನೆನಪಿರಲಿ, ನಮ್ಮ ಹೊಗಳಿಕೆಯು ನೀಡಿದ ಒಂದು ಕಾರ್ಯಕ್ಕೆ ಸಂಬಂಧಿಸಿರಬೇಕೇ ವಿನಃ ವಿದ್ಯಾರ್ಥಿಯನ್ನು / ವಿದ್ಯಾರ್ಥಿಗಳನ್ನು ಗುರಿಯಾಗಿರಿಸಿಕೊಂಡಿರಬಾರದು. ಇಲ್ಲದಿದ್ದಲ್ಲಿ ಇದು ವಿದ್ಯಾರ್ಥಿಯ ಪ್ರಗತಿಗೆ ಪೂರಕವಾಗಿರುವುದಿಲ್ಲ. “ಚೆನ್ನಾಗಿ ಮಾಡಿದ್ದೀರಿ” ಎಂಬುದು ಅಸಪಷ್ಟತೆಯಿಂದ ಕೂಡಿರುವುದರಿಂದ ಈ ಕೆಳಗಿನ ಯಾವುದಾದರೂ ಒಂದನ್ನು ಹೇಳಿದರೆ ಉತ್ತಮ-



## ತಿದ್ದುವಿಕೆ, ಪ್ರಚೋದನೆಯ ಬಳಕೆ (promting)-

ನೀವು ನಿಮ್ಮ ವಿದ್ಯಾರ್ಥಿಯೊಂದಿಗೆ ಕೈಗೊಳ್ಳುವ ಸಂಭಾಷಣೆಯ ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕವಾದುದು. ನೀವೇನಾದರೂ ವಿದ್ಯಾರ್ಥಿಗೆ ನೀವು ಹೇಳಿದ ಉತ್ತರ ಸರಿಯಲ್ಲ ಎಂದು ನಿಮ್ಮ ಸಂಭಾಷಣೆಯನ್ನು ಪೂರ್ಣಗೊಳಿಸಿದರೆ, ನಿಮ್ಮ ವಿದ್ಯಾರ್ಥಿಯು ನಿರಂತರವಾಗಿ ಯೋಚಿಸುವ ಹಾಗೂ ಸ್ವತಃ ಪ್ರಯತ್ನಿಸಲು ಸಹಾಯ ಮಾಡುವ ಅವಕಾಶವನ್ನು ಕಳೆದುಕೊಂಡಂತೆ. ನೀವು ಒಂದು ಸಿಳಿವನ್ನು ನೀಡಿದರೆ ಅಥವಾ ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಅವುರು ಮತ್ತಷ್ಟು ಆಳವಾಗಿ ಯೋಚಿಸಲು ಹಾಗೂ ಉತ್ತರವನ್ನು ಕಂಡುಹಿಡಿಯಲು ಮತ್ತು ಅವರ ಕಲಿಕೆಯ ಹೊಣೆಗಾರಿಕೆಯನ್ನು ಅವರೇ ತೆಗೆದುಕೊಳ್ಳಲು ಉತ್ತೇಜನವನ್ನು ನೀಡಿದಂತಾಗುವುದು. ಉದಾ: ಈ ಕೆಳಗಿನ ಅಂಘಗಳನ್ನು ಹೇಳುವುದರ ಮೂಲಕ ಸುಧಾರಿತ ಉತ್ತರ ಅಥವಾ ಒಂದು ಸಮಸ್ಯೆಯನ್ನು ವಿವಿಧ ದೃಷ್ಟಿಕೋನದಿಂದ ನೋಡಲು ವಿದ್ಯಾರ್ಥಿಗಳನ್ನು ಉತ್ತೇಜಿಸಬಹುದು.




ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಸಹಾಯ ಮಾಡುವುದಕ್ಕೆ ಉತ್ತೇಜಿಸುವುದು ಹೆಚ್ಚು ಸಮರ್ಪಕ.ಇದನ್ನು ಈ ಕೆಳಗಿನ ಹೇಳಿಕೆ / ಹೇಳಿಕೆ ಬಳಕೆ ಮಾಡುವ ಮೂಲಕ ಇಡೀ ತರಗತಿಗೆ ಪ್ರಶ್ನೆಯನ್ನು ಕೇಳಬಹುದು/ಮುಕ್ತವಾಗಿಸಬಹುದು.




ಹೌದು ಅಥವಾ ಇಲ್ಲ ಎಂದು ಹೇಳುವ ಮೂಲಕ ವಿದ್ಯಾರ್ಥಿಗಳನ್ನು ತಿದ್ದುವ ವಿಧಾನ ಅಕ್ಷರಗಳ ಅಥವಾ ಅಂಕೆಗಳ ಅಭ್ಯಾಸದಲ್ಲಿ ಸಮರ್ಪಕವಾಗಿರುವುದು. ಆದರೆ, ಇಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ಅವರ ಉತ್ತರದಲ್ಲಿ ಉದಯವಾಗಿರುವ / ಹೊರಬಂದಿರುವ ವಿನ್ಯಾಸಗಳನ್ನು ನೋಡಲು/ ವೀಕ್ಷಿಸಲು ಇದೇ ಬಗೆಯ ಉತ್ತರದೊಂದಿಗೆ ಜೋಡಿಸಲು, ಅಥವಾ ಯಾಕೆ ಈ ಉತ್ತರ ತಪ್ಪಾಗಿದೆ ಎಂಬ ಬಗ್ಗೆ ಮುಕ್ತ ಚರ್ಚೆಯನ್ನು ಮಾಡಲು ಉತ್ತೆಜಿಸಬಹುದು.

ಸ್ವ-ತಿದ್ದುಪಡಿಕೆ ಹಾಗೂ ಸಹತಿದ್ದುಪಡಿಕೆಯು ಹೆಚ್ಚು ಪರಿಣಾಮಕಾರಿಯಾದುದಾಗಿದೆ. ನೀವು ವಿದ್ಯಾರ್ಥಿಗಳು ನಿಗದಿತ ಕಾರ್ಯವನ್ನು ಜೊತೆಯಲ್ಲಿ ಮಾಡುತ್ತಿರುವಾಗ ಕಾರ್ಯವನ್ನು /ಉತ್ತರವನ್ನು ಪರಸ್ಪರ ಪರೀಕ್ಷೆ ಮಾಡುವುದನ್ನು ಅಥವಾ ತಮ್ಮ ಉತ್ತರವನ್ನು ತಾವೇ ಸ್ವತಃ ತಿದ್ದುಪಡಿ ಮಾಡುವುದನ್ನು ಹೇಳುವುದರ ಮೂಲಕ ಉತ್ತೇಜಿಸಬಹುದು.

## ಸಂಪನ್ಮೂಲ-3- ಪರೀಕ್ಷಾ ಮಾನಕಗಳನ್ನು ಹೇಗೆ ವಿನ್ಯಾಸಗೊಳಿಸುವುದು.

ಮಾನಕಗಳು ವಿವಿಧ ಹಂತದ ಪ್ರದರ್ಶನ /ಕಾರ್ಯಕ್ಷಮತೆಯನ್ನು ವ್ಯಾಖ್ಯಾನಿಸುವುದು ಹಾಗೂ ಇದನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ವ್ಯಕ್ತಪಡಿಸುವುದು.ಮೊದಲನೆಯದಾಗಿ ನೀವು ವಿದ್ಯಾರ್ಥಿಗಳು ಪ್ರಾತ್ಯಕ್ಷೀಕರಿಸಲು ಬೇಕಾದಂತಹ ಜ್ಞಾನ, ಕೌಶಲ, ಮತ್ತು ಗ್ರಹಿಕೆಯನ್ನು ಗುರುತಿಸಬೇಕು.ಇದರಿಂದ ನೀವು ಸಾಧನೆಯ ಮಾನದಂಡಗಳನ್ನು ಬರೆಯಬೇಕು.

ನಂತರ ವಿವಿಧ ಪ್ರದರ್ಶನದ/ಕಾರ್ಯಕ್ಷಮತೆಯ ಹಂತಗಳನ್ನು ವ್ಯಾಖ್ಯಾನಿಸಲು ಸಾಧ್ಯವಾಗುವಂತಹ ಸಾಧನೆಯ ವಿವಿಧ ಹಂತಗಳನ್ನು ವಿಭಾಗೀಕರಿಸಬೇಕಾಗುತ್ತದೆ (ಮೂರು ಹಂತಗಳಾಗಬಹುದು). ಉದಾಹರಣೆಗೆ ಈ ಕೆಳಗೆ ವಿವರಿಸಿದಂತೆ ಹಂತಗಳನ್ನು ಬರೆಯಬಹುದು:-

- ಸ್ಪಷ್ಟವಾಗಿ ದ್ಯುತಿಸಂಶ್ಲೇಷಣಾ ಕ್ರಿಯೆಯನ್ನು ವಿವರಿಸುವರು.
- ಸ್ವಲ್ಪ ಸ್ಪಷ್ಟತೆಯೊಂದಿಗೆ ದ್ಯುತಿಸಂಶ್ಲೇಷಣಾ ಕ್ರಿಯೆಯನ್ನುವಿವರಿಸುವರು.
- ಕಡಿಮೆ ಸ್ಪಷ್ಟತೆಯೊಂದಿಗೆ ದ್ಯುತಿಸಂಶ್ಲೇಷಣಾ ಕ್ರಿಯೆಯನ್ನು ವಿವರಿಸುವರು.

  ಅಥವಾ

- ಕಥೆ, ತತ್ವ, ಮತ್ತು ಪಾತ್ರಗಳ ಬಗ್ಗೆ ಸಮಗ್ರ ಜ್ಞಾನವಿದೆ ಎಂಬುದನ್ನು ತೋರಿಸುತ್ತದೆ.
- ಕಥೆ ಮತ್ತು ಕಥೆಯಲ್ಲಿನ ಕೆಲವು ವ್ಯಕ್ತಿಗಳ/ಪಾತ್ರಗಳ ಬಗ್ಗೆ ಉತ್ತಮ ಜ್ಞಾನವಿದೆ ಎಂಬುದನ್ನು ತೋರಿಸುತ್ತದೆ.
- ಕಥೆಯ ಯಾವುದರ ಬಗ್ಗೆ ಇದೆ ಹಾಗೂ ಕೆಲವೇ ಕಲೆವು ಪಾತ್ರಗಳ ಹೆಸರನ್ನು ಹೇಳುವಂತಹ ಪ್ರಾಥಮಿಕ ಜ್ಞಾನವನ್ನು ತೋರಿಸುತ್ತದೆ.

  ಅಥವಾ

- ಸ್ವತಂತ್ರವಾಗಿ ಹಾಗೂ ಸರಿಯಾಗಿ ಸಾಧನವನ್ನು ಬಳಸುವರು.
- ಕೆಲವೊಮ್ಮೆ ಸಹವಿದ್ಯಾರ್ಥಿಗಳ ಅಥವಾ ಶಿಕ್ಷಕರ ಸಹಾಯದಿಂದ ಸಾಧನವನ್ನು ಬಳಸುವರು.
- ಶಿಕ್ಷಕರ ಸಹಾಯದೊಂದಿಗೆ ಸಾಧನವನ್ನು ಬಳಸಲು ಪ್ರಯತ್ನಿಸುವರು.

ಈ ಹಂತಗಳ ವಿವರಕವನ್ನು ವಿದ್ಯಾರ್ಥಿಗಳೊಂದಿಗೆ ಮತ್ತು ವಿದ್ಯಾರ್ಥಿಗಳಿಂದಲೇ ಹೇಗೆ ಪ್ರದರ್ಶನವನ್ನು/ ಕಾರ್ಯಕ್ಷಮತೆಯನ್ನು ನೀಡಿದ್ದಾರೆ ಮತ್ತು ಉನ್ನತ ಸಾಧನೆಗೈಯಲು ಇನ್ನೇನು ಮಾಡುವ ಅಗತ್ಯವಿದೆ ಎಂಬುದನ್ನು ವಿವರಿಸಲು ಬಳಸಬಹುದು.

# References/bibliography


Assessment for Learning, http://www.assessmentforlearning.edu.au/default.asp?id=912 (accessed 20 October 2014).

Central Board of Secondary Education (2009) *Teachers' Manual on Continuous and Comprehensive Evaluation: Classes IX & X*. Delhi: Central Board of Secondary Education. Available from: http://www.cbse.nic.in/cce/index.html (accessed 20 October 2014).

Intellectual Takeout (undated) 'Middle and high schools critical-thinking rubric' (online). Available from: http://www.intellectualtakeout.org/library/chart-graph/middle-and-high-schools-critical-thinking-rubric (accessed 20 October 2014).

National Council of Educational Research and Training (2005) *National Curriculum Framework* (NCF). New Delhi: NCERT.

Valerie Burger [Pinterest user] (undated) 'Art rubrics elementary grade level' (online), Pinterest. Available from: http://www.pinterest.com/pin/391602130070842472/ (accessed 20 October 2014).

# Acknowledgements

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Table 1: extract from Intellectual Takeout (undated) 'Middle and high schools critical thinking rubric', in http://www.intellectualtakeout.org.

Table 2: adapted from: Valerie Burger [Pinterest user] (undated) 'Art rubrics elementary grade level', available from http://www.pinterest.com.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.